ಹತ್ತಿರವಾದರೂ ಹೇಳಿದರೆ ನಿನ್ನನ್ನು ಉಳಿಸುವುದಿಲ್ಲವೆಂದು ಬೆದರಿಕೆ ಹಾಕಿ ಬಿಟ್ಟುಹೋಗಿರುತ್ತಾರೆ. ಆ ಹೆಣ್ಣುಮಗಳು ತನ್ನ ಊರಿಗೆ ಹೋದಮೇಲೆ ಮತ್ತೆ ಅಲ್ಲಿಗೂ ಆ ಎಸ್.ಐ.ಹೋಗಿ ಮತ್ತೆ ಅತ್ಯಾಚಾರಕ್ಕೆ ಬಲವಂತವನ್ನು ಮಾಡಿದಾಗ ಆ ಹೆಣ್ಣುಮಗಳು ಆಗಿರತಕ್ಕ ಸಂಗತಿಯನ್ನು ತಂದೆ ತಾಯಿಗಳ ಹತ್ತಿರ ಹೇಳಿದಾಗ, ಅವರುಗಳು ಮೈಸೂರಿನ ಪೋಲೀಸ್ ಆಯುಕ್ತರಿಗೆ ಈ ವಿಚಾರವನ್ನು ತಿಳಿಸಿದಮೇಲೆ ಆಯುಕ್ತರು ತಕ್ಷಣ ಕ್ರಮ ತೆಗೆದುಕೊಂಡು ಹೆಣ್ಣುಮಗಳ ತಂದೆತಾಯಿಯರು ಮತ್ತು ಹೆಣ್ಣುಮಗಳು ಕೊಟ್ಟಂಥ ದೂರಿನ ಮೇಲೆ ಆ ಸಬ್‌ಇನ್‌ಸ್ಪೆಕ್ಟರನ್ನು ಅಮಾನತ್ತುಗೊಳಿಸಿ ಪೋಲೀಸ್ ಕಸ್ಟಡಿಗೆ ಒಳಪಡಿಸಿದ್ದಾರೆ. ಮತ್ತು ಆದಷ್ಟು ಬೇಗ ಆ ಎಸ್.ಐ.ನ್ನು ಸೇವೆಯಿಂದ ವಜಾ ಗೊಳಿಸುವುದಾಗಿ ಹೇಳಿದ್ದಾರೆ. ಜನರಿಗೆ ರಕ್ಷಣೆ ನೀಡಬೇಕಾದ ಆರಕ್ಷಕರೇ ಈ ರೀತಿ ಅತ್ಯಾಚಾರ ಮಾಡಿದರೆ ಇನ್ನು ಜನಸಾಮಾನ್ಯರು ಬದುಕುವುದು ಹೇಗೆ? ಹೆಣ್ಣುಮಕ್ಕಳು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗಲು ಹೇಗೆ ಸಾಧ್ಯರಾಗುತ್ತದೆ? ಆದ್ದರಿಂದ ಆ ಎಸ್.ಐ.ನ್ನು ಕೂಡಲೆ ಸೇವೆಯಿಂದ ವಜಾಮಾಡಬೇಕಾಗುತ್ತದೆ. ಇಂಥವರಿಗೆ ಸರ್ಕಾರಿ ಸೇವೆಯಲ್ಲಿ ಕೆಲಸಮಾಡಲು ಅವಕಾಶ ಮಾಡಿಕೊಡಬಾರದು. ಹೆಣ್ಣುಮಕ್ಕಳಿಗೆ ರಕ್ಷಣೆ ಕೊಡಬೇಕು, ಸರ್ಕಾರದ ಇದರ ಬಗ್ಗೆ ನೇರವಾಗಿ ಹೇಳಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಡಿ. ಬಸವರಾಜ್ : ಮಾನ್ಯ ಅಧ್ಯಕ್ಷರೇ, ಈ ಎಸ್.ಐ. ರಮೇಶ್ ಎಂಬುವವರು ಈ ಹಿಂದೆ ಇಲಾಖೆಯಿಂದ ಅಮಾನತ್ತುಗೊಂಡಿದ್ದರು. ಅಂದರೆ ಇಂಥ ದುರಾಲೋಚನೆಯುಳ್ಳ ವ್ಯಕ್ತಿಯನ್ನು ಮೊದಲಿನಿಂದಲೂ ಇಲಾಖೆಯಲ್ಲಿ ಮುಂದುವರೆಯಲು ಬಿಟ್ಟಿದ್ದು ಮೊದಲನೆಯ ತಪ್ಪು. ತಾವು ಆ ವ್ಯಕ್ತಿಗೆ ಶಿಕ್ಷೆಯನ್ನು ಕೊಡಬೇಕು. ಆ ಹೆಣ್ಣುಮಗಳಿಗೆ ಸರ್ಕಾರದಿಂದ...

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಯವರು) : ಆಧ್ಯಕ್ಷರೆ, ಶೂನ್ಯ ವೇಳೆಯೆಂದರೆ ಈ ರೀತಿ ಮಾತನಾಡುವುದೆ? ಯಾವುದಾದರು ಘಟನೆ ನಡೆದಿದ್ದರೆ ಅದನ್ನು ಸರ್ಕಾರದ ಗಮನಕ್ಕೆ ತರುವುದು, ಸರ್ಕಾರದಿಂದ ಉತ್ತರವನ್ನು ಬಯಸುವುದು. ಆದರೆ ಈ ರೀತಿ ವಿವರಣೆ ನೀಡಿಕೊಂಡು ಹೋದರೆ ಹೇಗೆ? ಇದು ತಂಬಾ ಜಾಸ್ತಿಯಾಯಿತು. ಈಗಾಗಲೇ ಇದರ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ, ಆ ಎಸ್.ಐ.ಯನ್ನು ಅಮಾನತ್ತು ಮಾಡಲಾಗಿದೆ ಅವನನ್ನು ಜೈಲಿಗೆ ಕಳಿಸಲಾಗುವುದು.

ಅಧ್ಯಕ್ಷರು : ಈಗ ಶೂನ್ಯವೇಳೆಯ ಚರ್ಚೆ ಮುಕ್ತಾಯವಾಗಿದೆ. ಇನ್ನು ಮುಂದೆ ಬೇಡಿಕೆಗಳ ಮೇಲೆ ಚರ್ಚೆ ಪ್ರಾರಂಭವಾಗುತ್ತದೆ. ಬೇಡಿಕೆಗಳ ಸಂಖ್ಯೆ 30,31ರ ಮೇಲೆ ಚರ್ಚೆ ಪ್ರಾರಂಭವಾಗುತ್ತಿದೆ. ಉಡುಪಿ ಕ್ಷೇತ್ರದ ಶಾಸಕರಾದ ಶ್ರೀಮಾನ್ ಸಭಾಪತಿಯವರು ಚರ್ಚೆಯನ್ನು ಪ್ರಾರಂಭ ಮಾಡುತ್ತಾರೆ.

ವಿತ್ತೀಯ ಕಾರ್ಯಕಲಾಪ

1997-98ನೇ ಸಾಲಿನ ಬೇಡಿಕೆ ಸಂಖ್ಯೆ 30 ಮತ್ತು 31ರ ಮೇಲೆ ಮುಂದುವರೆದ ಚರ್ಚೆ

+ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಅಧ್ಯಕ್ಷರೆ, ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಗಳ ಬೇಡಿಕೆಗಳ ಮೇಲೆ ಚರ್ಚೆ ಮಾಡಲು ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಈ ಇಲಾಖೆಯ ಬೇಡಿಕೆಯನ್ನು ನಾನು ವಿರೋಧ ಮಾಡಬಯಸುತ್ತೇನೆ.

(ಅಧ್ಯಕ್ಷರ ಪೀಠವನ್ನು ಉಪಾಧ್ಯಕ್ಷರು ಅಲಂಕರಿಸಿದರು)

ನಗರಾಭಿವೃದ್ಧಿ ಇಲಾಖೆಯು ಬಹಳ ಮಹತ್ತರವಾದ ಇಲಾಖೆ. ಆಯವ್ಯಯವನ್ನು ಅಧಿಕಾರಿಗಳು ಸಂಬಂಧಪಟ್ಟ ಸಚಿವರು ಪ್ರಾಮಾಣಿಕವಾಗಿ ವೈಜ್ಞಾನಿಕವಾಗಿ ರೂಪಿಸುವ ಬಗ್ಗೆ ಕೂಲಂಕುಷವಾಗಿ ಅಧ್ಯಯನ ನಡೆಸಿ ಮುಂದಿನ ವರ್ಷದ ಆಯವ್ಯಯವನ್ನು ರೂಪಿಸುವಾಗ ಅದಕ್ಕೆ ಸರಿಯಾದ ಅನುದಾನವನ್ನು ಕೇಳಬೇಕಾಗುತ್ತದೆ. ಆದರೆ ಈಗಿನ ಪರಿಸ್ಥಿತಿ ಏನೆಂದರೆ, ಕಳೆದ ವರ್ಷ ಎಷ್ಟು ಅನುದಾನವನ್ನು ಕೊಟ್ಟಿರುತ್ತಾರೋ ಅದಕ್ಕೆ 10 ಪರ್‌ಸೆಂಟ್ ಇಲ್ಲವೆ 20 ಪರ್‌ಸೆಂಟ್ ಸೇರಿಸಿ ಕೊಟ್ಟುಬಿಡುವುದಾಗಿದೆ. ಇಲ್ಲದಿದ್ದರೆ ಕಳೆದ ವರ್ಷ ಎಷ್ಟು ಅನುದಾನ ಕೊಟ್ಟಿತ್ತೋ ಅಷ್ಟನ್ನೇ ಈ ವರ್ಷವೂ ಕೊಡುವ ಪದ್ಧತಿ ಇದೆ. ಇದು ಸರಿಯಲ್ಲವೆಂದು ನನ್ನ ವಾದ. ಜನಸಾಮಾನ್ಯರಿಗೆ ಮೂಲಭೂತವಾದ ಸೌಲಭ್ಯವನ್ನು ಒದಗಿಸುವ ಜವಾಬ್ದಾರಿ ಸರ್ಕಾರದ ಮೇಲಿದೆ. ಈ ಸದನಕ್ಕೆ ಚುನಾಯಿತರಾಗಿ ಬರುವ ಪ್ರತಿನಿಧಿಗಳು ನಮ್ಮ ನಮ್ಮ ಕ್ಷೇತ್ರಗಳಲ್ಲಿ ಆಶ್ವಾಸನೆಗಳನ್ನು ಕೊಟ್ಟು ಬಂದಿರುತ್ತೇವೆ. ನಮ್ಮ ನಗರದ ನೀರುಸರಬರಾಜು ವ್ಯವಸ್ಥೆ, ಒಳಚರಂಡಿ ವ್ಯವಸ್ಥೆಯನ್ನು ಸರಿಪಡಿಸುತ್ತೇವೆಂಬ ಭರವಸೆಯನ್ನು ಕೊಟ್ಟು ಬಂದಿರುತ್ತೇವೆ. ಪ್ರತಿ ವರ್ಷ ನಾವು ಚುನಾಯಿಸಿ ಬರುವಾಗ ಆ ರೀತಿ ಮಾಡುತ್ತೇವೆ. ಚುನಾವಣೆಯಾಗುತ್ತದೆ, ಯಾವುದೋ ಒಂದು ಪಕ್ಷ ಅಧಿಕಾರಕ್ಕೆ ಬರುತ್ತದೆ. ಆದರೆ ಆಲ್ಲಿರುವ ಅಧಿಕಾರಿಗಳು ಅವರೇ, ಇಂತಿಂಥ ಇಲಾಖೆಗೆ ಇಷ್ಟಿಷ್ಟು ಕೊಟ್ಟುಕೊಂಡು ಹೋಗಬೇಕೆಂದು ಅವರಿಗೆ ಗೈಡ್‌ಲೈನ್ಸ್ ಇದೆ. ಹೀಗಾಗಿ ಅವರುಗಳು ವೈಜ್ಞಾನಿಕವಾಗಿ ಆಲೋಚನೆ ಮಾಡುವುದಿಲ್ಲ. ಜನರ ಸಮಸ್ಯೆಗಳ ಅರಿವು ಅಧಿಕಾರಿಗಳಿಗೆ ಇರುವುದಿಲ್ಲ. ಅವರು ಒಂದು ರೀತಿ ಕೂಪಮಂಡೂಕವಿದ್ದಂತೆ. ಒಂದು ಬಾವಿಯಲ್ಲಿ ಒಂದು ಮಂಡೂಕವಿದ್ದರೆ ಅದರದು ಅದೇ ಪ್ರಪಂಚ. ಆ ರೀತಿ ಅವರಿಗೆ ಸ್ವಲ್ಪ ಅನುದಾನವನ್ನು ಕೊಡುತ್ತಾರೆ ಅದನ್ನು ವಿಂಗಡಣೆ ಮಾಡಿ ಹಾಕುವುದು. ಇಂದು ಬೆಂಗಳೂರು, ಮೈಸೂರು, ಮಂಗಳೂರು, ಉಡುಪಿ ಈ ರೀತಿ ಯಾವುದೇ ನಗರವಿರಲಿ, ಇಲ್ಲಿ 25 ವರ್ಷಗಳ ಹಿಂದೆ ಇದ್ದ ಜನಸಂಖ್ಯೆ ಎಷ್ಟು, ಈಗ ಇರುವ ಜನಸಂಖ್ಯೆ ಎಷ್ಟು ಎಂಬ ಬಗ್ಗೆ ಅಧ್ಯಯನ ಮಾಡಬೇಕು. ಹಿಂದೆ ಪ್ರತಿಯೊಂದು ನಗರಕ್ಕೂ 25 ವರ್ಷಗಳ ಹಿಂದಿನ ಯೋಜನೆಯನ್ನು ರೂಪಿಸಿಕೊಂಡು ಬಂದಿದ್ದೇವೆ. ಆ ನಗರಗಳಿಗೆ ನೀರುಸರಬರಾಜು, ಒಳಚರಂಡಿ ವ್ಯವಸ್ಥೆಯನ್ನು ರೂಪಿಸುವ ಸಲುವಾಗಿ ಯೋಜನೆಯನ್ನು ರೂಪಿಸಿಕೊಂಡು ಬಂದಿದ್ದೇವೆ. ಆಯಾಯ ವರ್ಷಗಳಲ್ಲಿ ಕೆಲವು ಲಕ್ಷ ರೂಪಾಯಿಗಳ ಯೋಜನೆಗಳನ್ನು ತಯಾರು ಮಾಡಿದ್ದೇವೆ. ಆದರೆ ಅದೇ ಯೋಜನೆ 25 ವರ್ಷಗಳ ನಂತರ ಇದ್ದರೆ ಹೇಗೆ? 25 ವರ್ಷಗಳ ನಂತರ ಜನಸಂಖ್ಯೆ ಎಷ್ಟಿದೆ? ಬಹುಮಹಡಿಗಳ ಕಟ್ಟಡ ಎಷ್ಟಿದೆ? ಎಷ್ಟು ಹೊಸ ಹೊಸ ಮನೆಗಳು ಬಂದಿದೆ? ಎಷ್ಟು ಜನ ಸಂಖ್ಯೆ ಜಾಸ್ತಿಯಾಗಿದೆ ಎಂಬ ಬಗ್ಗೆ ಅಧ್ಯಯನಮಾಡಿ ನಾವು ಆ ಮೂಲಕ ಹಣವನ್ನು ಮಂಡಳಿಗಳಿಗೆ ಒದಗಿಸಬೇಕಾಗಿದೆ. ಆದರೆ ಆ ವ್ಯವಸ್ಥೆ ಇಂದು ನಡೆಯುತ್ತಿಲ್ಲ. ಅದಕ್ಕೆ ಒಂದು ಉದಾರಣೆ ಹೇಳುವುದಾದರೆ, ಇವತ್ತು ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಒಳಚರಂಡಿ ಯೋಜನೆಯ ಪರಿಸ್ಥಿತಿ ಏನಾಗಿದೆಯೆಂದರೆ, ಸುಮಾರು 25 ವರ್ಷಗಳ ಹಿಂದಿನ ಯೋಜನೆಯನ್ನು ಒಳಚರಂಡಿ ಯೋಜನೆಯಲ್ಲಿ ರೂಪಿಸಿದ್ದಾರೆ. ಆದರೆ ಇವತ್ತು ಮಂಗಳೂರಿನ ಜನಸಂಖ್ಯೆ ಎಷ್ಟಾಗಿದೆ? ಮಂಗಳೂರಿನ ಪರಿಸ್ಥಿತಿ ಏನಾಗಿದೆ? ಇಂದು ಮಂಗಳೂರು ಮಲೇರಿಯಾದಿಂದ ತುಂಬಿಹೋಗಿದೆ.

ಶ್ರೀ ಎನ್. ಯೋಗೇಶ್ ಭಟ್ (ಮಂಗಳೂರು) : ಮಾನ್ಯ ಉಪಾಧ್ಯಕ್ಷರೆ, ಅವರು ಮಂಗಳೂರು ಮಹಾನಗರಪಾಲಿಕೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಕಳೆದ 25 ವರ್ಷಗಳ ಹಿಂದಿನ ಒಳಚರಂಡಿ ಯೋಜನೆ ಎಷ್ಟು ಅವ್ಯವಸ್ಥೆಯಿಂದ ಇದೆಯೆಂದರೆ, ಅದು ಇವತ್ತು ಅನೇಕ ರೋಗಗಳಿಗೆ ಕಾರಣವಾಗಿದೆ.

ಉಪಾಧ್ಯಕ್ಷರು : ಕಾಂಗ್ರೆಸ್ ಪಕ್ಷದ ಸದಸ್ಯರಿಗೆ ಬೇಡಿಕೆಗಳ ಬಗ್ಗೆ ಮಾತನಾಡಲು ಒಂದು ಗಂಟೆ 15 ನಿಮಿಷ ಅವಕಾಶ ಕೊಡಲಾಗಿದೆ. ತಾವು ದಯಮಾಡಿ ಕುಳಿತುಕೊಳ್ಳಿ. ತಮ್ಮ ಸಮಯದಲ್ಲಿ ತಾವು ಮಾತನಾಡಿ. ದಯಮಾಡಿ ತಾವು ಕುಳಿತುಕೊಳ್ಳಿ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಉಪಾಧ್ಯಕ್ಷರೆ, ಅವರು ಆ ಕ್ಷೇತ್ರದ ಪ್ರತಿನಿಧಿಯಾಗಿ ಅವರ ಸಮಸ್ಯಯನ್ನು ಹೇಳುತ್ತಿದ್ದರು. ಮಂಗಳೂರಿನಲ್ಲಿ ಎಲ್ಲಿ ಅಂದರೆ ಅಲ್ಲಿ ಚರಂಡಿಗಳು ಒಡೆದು ಹೋಗಿ, ಮ್ಯಾನ್‌ಹೋಲ್‌ಗಳು ಒಡೆದುಹೋಗಿ ಸುತ್ತಮುತ್ತ ಎಲ್ಲಾ ಕಡೆ ಮಲೇರಿಯ ಹಬ್ಬಿದೆ. ಅಲ್ಲಿ ಆಸ್ಪತ್ರೆ ಇದೆ, ಆದರೆ ಆಸ್ಪತ್ರೆಗಳಲ್ಲಿ ವೈದ್ಯರು ಇರುವುದಿಲ್ಲ ಅಥವಾ ವ್ಯಾಕ್ಸಿನೇಶನ್ ಇರುವುದಿಲ್ಲ. ಇಂತಹ ಒಂದು ಪರಿಸ್ಥಿತಿ ಅಲ್ಲಿದೆ. ನಾನು ಆದೇ ರೀತಿ ಉಡುಪಿ ನಗರಸಭೆ ಬಗ್ಗೆ ಕೂಡ ಹೇಳಬಯಸುತ್ತೇನೆ. ನಾನು ಇದನ್ನೊಂದು ಉದಾಹರಣೆಯಾಗಿ ತೆಗೆದುಕೊಂಡು ಹೇಳುತ್ತಿದ್ದೇನೆ. ಎಲ್ಲಾ ನಗರಗಳ ಒಳಚರಂಡಿ ವ್ಯವಸ್ಥೆ ಕೂಡ ಇದೇ ರೀತಿಯಾಗಿದೆ. ಉಡುಪಿ ನಗರದಲ್ಲಿ ಸುಮಾರು 25 ವರ್ಷಗಳ ಹಿಂದೆ ಒಳಚರಂಡಿ ವ್ಯವಸ್ಥೆಯನ್ನು ಮಾಡಲಾಗಿದೆ. ಈ ಒಳಚರಂಡಿ ವ್ಯವಸ್ಥೆಯನ್ನು ಮಾಡಿ ಅದನ್ನು ಇಂಟ್ರಡ್ಯೂಸ್ ಮಾಡುವಾಗಲೇ ಊರಿನ ಜನರಿಂದ ಆ ಬಗ್ಗೆ ಆಕ್ಷೇಪಣೆಗಳು ಬಂದಿದ್ದವು. ಈ ಒಳಚರಂಡಿ ವ್ಯವಸ್ಥೆಯಲ್ಲಿ ಮ್ಯಾನ್‌ಹೋಲ್‌ಗಳನ್ನಾಗಲೀ ಅಥವಾ ಪೈಪ್‌ಲೈನ್‌ಗಳನ್ನಾಗಲೀ ಸರಿಯಾಗಿ ಹಾಕಿಲ್ಲ ಎಂದು ಈ ವ್ಯವಸ್ಥೆಯನ್ನು ಸುಮಾರು 1985ರಲ್ಲಿ ಆಗಿನ ಮಾನ್ಯ ಮುಖ್ಯಮಂತ್ರಿಗಳು ಉದ್ಘಾಟನೆ ಮಾಡಲಿಕ್ಕೆ ಹೋದಾಗಲೇ ಅಲ್ಲಿನ ಜನಸಾಮಾನ್ಯರು ಅಬ್ಜೆಕ್ಷನ್ , ಮಾಡಿದ್ದರು. ಈ ವ್ಯವಸ್ಥೆ ಸರಿಯಾಗಿ ಮಾಡಿಲ್ಲ. ಆದ್ದರಿಂದ ಇದನ್ನು ಸಂಪೂರ್ಣವಾಗಿ ಪುನರ್ ಪರಿಶೀಲನೆ ಮಾಡಬೇಕು,ಅದನ್ನು ಸರಿಪಡಿಸದೇ ಉದ್ಘಾಟನೆ ಮಾಡಬಾರದು ಎಂದು ಆಗಲೇ ದೂರುಗಳು ಬಂದಿದ್ದವು. ಆದರೂ ಸಹಿತ ಆ ಒಳಚರಂಡಿ ವ್ಯವಸ್ಥೆ ಉದ್ಘಾಟನೆ ಆಯಿತು. ಈಗಲೂ ಉಡುಪಿಯಲ್ಲಿ ಅದೇ ಒಳಚರಂಡಿ ವ್ಯವಸ್ಥೆ ಇದೆ. ಎಲ್ಲೆಲ್ಲಿ ಹೋದರೂ ಮ್ಯಾನ್‌ಹೋಲ್‌ಗಳು ಒಡೆದು ಹೋಗಿರುವುದನ್ನು ಕಾಣಬಹುದುಗಿದೆ. ಅಲ್ಲಿಯ ಪರಿಸ್ಥಿತಿ ನಿವಾರಣೆಗೆ ಜನರಿಗೆ ದೇವರೇ ಗತಿ ಎನ್ನುವಂತಾಗಿದೆ. ಅಲ್ಲಿ ಮ್ಯಾನ್‌ಹೊಲ್‌ಗಳನ್ನು ನಿರ್ಮಿಸುವಾಗ ಸರಿಯಾಗಿ ಕಟ್ಟದೇ ಇದ್ದುದರಿಂದ ಅವು ಒಡೆದು ಹೋಗಿವೆ. ಹರಿಯುವ ನೀರಿನ ತೋಡುಗಳಲ್ಲಿ ಮ್ಯಾನ್‌ಹೋಲ್‌ಗಳನ್ನು ಕಟ್ಟಿದ್ದಾರೆ, ಅವುಗಳೂ ಒಡೆದು ಹೋಗಿವೆ. ಹರಿಯುವ ನೀರಿನ ತೋಡುಗಳಲ್ಲಿ ಒಳಚರಂಡಿ ನೀರು ಸೇರಿಕೊಂಡು ಇಡೀ ನಗರದಲ್ಲಿ ಅದರ ಕೆಟ್ಟ ವಾಸನೆ ಹರಡಿಕೊಂಡಿದೆ. ಈ ಬಗ್ಗೆ ನಾವು ಒಳಚರಂಡಿ ಮಂಡಳಿಗೆ ದೂರು ನೀಡಿದರೆ ಅವು ನಮ್ಮ ಹತ್ತಿರ ಅನುದಾನ ಇಲ್ಲ, ನಮಗೆ ಮೈನ್‌ಟೇನ್ ಮಾಡಲಿಕ್ಕೆ ಹಣವೇ ಇಲ್ಲವೆಂದು ಹೇಳುತ್ತಿದ್ದಾರೆ. ಒಳಚರಂಡಿ ಮಂಡಳಿಗೆ ಸರ್ಕಾರ ಸಾಕಷ್ಟು ಅನುದಾನವನ್ನೇ ಕೊಟ್ಟಲ್ಲ. ಈ ಸಾಲಿನಲ್ಲಿ ಕೇವಲ 66.25 ಕೋಟಿ

ರೂಪಾಯಿಗಳನ್ನು ಮಾತ್ರ ಇದಕ್ಕೆ ಒದಗಿಸಲಾಗಿದೆ ಎಂದು ನನ್ನ ಗಮನಕ್ಕೆ ಬಂದಿದೆ. ಈ ಹಣದಲ್ಲಿ ಒಳಚರಂಡಿ ಮಂಡಳಿಗೆ ಕೇವಲ ಮೈನ್‌ಟೇನ್ ಮಾಡಲಿಕ್ಕೂ ಕೂಡ ಸಾಧ್ಯವಾಗುತ್ತಿಲ್ಲ. ಹೀಗಾದಲ್ಲಿ ಅವರು ಹೊಸದಾಗಿ ಯೋಜನೆಗಳನ್ನು ಹೇಗೆ ರೂಪಿಸಲು ಸಾಧ್ಯ? 25 ವರ್ಷಗಳ ಹಿಂದಿನ ಯೋಜನೆಯನ್ನು ಸರಿಪಡಿಸಲಿಕ್ಕೂ ಕೂಡ ನಿಮ್ಮ ಹತ್ತಿರ ಅನುದಾನ ಇಲ್ಲ. ಹೊಸ ಯೋಜನೆಗಳನ್ನು ರೂಪಿಸುವಾಗ ಅದಕ್ಕೆ ಮೂಲಭೂತವಾಗಿ ಬೇಕಾದಂತಹ ಹಣವನ್ನು ಅಯವ್ಯಯದಲ್ಲಿ ಸರ್ಕಾರ ಒದಗಿಸದೇ ಹೋದರೆ ಅದು ಹೇಗೆ ತಾನೆ ತಾನು ಜನರಿಗೆ ಕೊಟ್ಟ ಆಶ್ವಾಸನೆಗಳನ್ನು ಪೂರೈಸುತ್ತದೆ ಎಂಬುದು ನನ್ನ ಮುಖ್ಯವಾದಂತಹ ಪ್ರಶ್ನೆಯಾಗಿದೆ. ಇವತ್ತು ಉಡುಪಿಯ ಒಳಚರಂಡಿ ವ್ಯವಸ್ಥೆ ಎಲ್ಲಿಯತನಕ ಹದಗೆಟ್ಟಿದೆ ಎಂದರೆ, 38 ಸಾವಿರ ಜನಸಂಖ್ಯೆಯುಳ್ಳ ಪುರಸಭೆಯಾಗಿದ್ದಂತಹ ಉಡುಪಿಯನ್ನು ಈಗ 1 ಲಕ್ಷ 25 ಸಾವಿರ ಜನಸಂಖ್ಯೆಯುಳ್ಳ ನಗರಸಭೆಯನ್ನಾಗಿ ಪರಿವರ್ತಿಸಲಾಗಿದೆ. ಒಂದು ಕಡೆ ಅಂತರರಾಷ್ಟ್ರೀಯ ಸಿಟಿಯಾಗಿ ಡೆವಲಪ್ ಆಗಿರುವ ಮಣಿಪಾಲ್ ಇದೆ. ಒಂದು ಎರಡು ವರ್ಷಕ್ಕೊಮ್ಮೆ ಪರ್ಯಾಯ ಉತ್ಸವ ನಡೆಯುವ ಧಾರ್ಮಿಕ ಕ್ಷೇತ್ರ ಇದೆ. ಅಲ್ಲಿ 10 ಲಕ್ಷ ಜನ ಯಾತ್ರಿಕರು ಬಂದು ಹೋಗುವಂತಹ ಫ್ಲೋಟಿಂಗ್ ಪಾಪುಲೇಷನ್ ಇದೆ. ಮತ್ತೊಂದು ಕಡೆ ಮೀನುಗಾರಿಕಾ ಬಂದರು ಇರತಕ್ಕ ಮಲ್ಪೆ ಇದೆ. ಅದು ಮೀನುಗಾರಿಕಾ ಬಂದರು ಆಗಿರುವುದರಿಂದ ಅಲ್ಲಿಯೂ ಸಹ ಸಾಕಷ್ಟು ಕೊಳಚೆ ಉದ್ಭವವಾಗಿದೆ. ಅದನ್ನು ಸರಿಪಡಿಸಬೇಕಾದರೆ ಸುಮಾರು 40 ಕೋಟಿ ರೂಪಾಯಿಗಳ ಹೊಸ ಯೋಜನೆಯನ್ನು ನಾವು ತರಲೇಬೇಕಾಗಿದೆ. ಈ ಯೋಜನೆಯನ್ನು ತಾವು ಜಾರಿಗೆ ತರದಿದ್ದರೆ ಇನ್ನು 5-10 ವರ್ಷಗಳಲ್ಲಿ ಇಡೀ ನಗರದಲ್ಲಿ ಸಾಂಕ್ರಾಮಿಕ ರೋಗಗಳು ಹರಡಿ ನಗರ ಪ್ರಕ್ಷುಬ್ಧ ಪರಿಸ್ಥಿತಿಗೆ ಪರಿವರ್ತನೆಯಾಗುವ ಪರಿಸ್ಥಿತಿ ಉದ್ಭವಿಸಬಹುದು. ಅದೇ ರೀತಿ ನೀರು ಸರಬರಾಜು ಮಂಡಳಿಯ ಪರಿಸ್ಥಿತಿಯೂ ಸಹಾ ಹಾಗೇ ಆಗಿದೆ. ಈ ಯೋಜನೆಗಳೆಲ್ಲಾ ಒಳಚರಂಡಿ ಮತ್ತು ನೀರು ಸರಬರಾಜು ಮಂಡಳಿಯ ಕೆಳಗೆ ಇತ್ತು. ಅನುದಾನ ಇಲ್ಲವೆಂದು ಅವುಗಳನ್ನೆಲ್ಲಾ ನಗರಸಭೆಗೆ ವರ್ಗಾವಣೆ ಮಾಡಿದ್ದಾರೆ. ಹಿಂದಿನ ಸರ್ಕಾರ ಇರುವಾಗ ಈ ರೀತಿ ಅವುಗಳನ್ನು ನಗರಸಭೆಗೆ ವರ್ಗಾವಣೆ ಮಾಡಬಾರದು ಎಂದು ನಾನು ಕಳಕಳಿಯಿಂದ ಕೇಳಿಕೊಂಡಿದ್ದೆ. ನಗರವನ್ನು ಶುಚಿಯಾಗಿ ಇಡಲಿಕ್ಕೆ ನಗರಸಭೆಯ ಆದಾಯ ಸಾಕಾಗುತ್ತಿಲ್ಲ. ಹೀಗಿರುವಾಗ ನೀವು ನೀರು ಸರಬರಾಜು ಮಂಡಳಿಯ ಜವಾಬ್ದಾರಿಯನ್ನು ನಗರಸಭೆಗೆ ಕೊಟ್ಟಿದ್ದೀರಿ. ನಗರಸಭೆಗೆ ಅದನ್ನು ವರ್ಗಾಯಿಸಿ ಅದಕ್ಕೆ ಬೇಕಾಗುವಂತಹ ಸಿಬ್ಬಂದಿಯನ್ನೇನಾದರೂ ಕೊಟ್ಟಿದ್ದೀರಾ ಎಂದರೆ ಅದೂ ಇಲ್ಲ ಆ ಒಳಚರಂಡಿ ಮಂಡಳಿಯ ಸಿಬ್ಬಂದಿಗಳಿಗೂ ಮತ್ತು ನಗರಸಭೆಯ ಸಿಬ್ಬಂದಿಗಳಿಗೂ ಒಂದು ರೀತಿಯ ಕಾಂಬಿನೇಷನ್ನೇ ಇಲ್ಲ. ಇವರು ಇವರದ್ದೇ ತೊಂದರೆಗಳನ್ನು ಹೇಳುತ್ತಿರುತ್ತಾರೆ. ಅವರು ಅವರದ್ದೇ ತೊಂದರೆಗಳನ್ನು ಹೇಳುತ್ತಿರುತ್ತಾರೆ. ಆ ಮಂಡಳಿಯಲ್ಲಿ ಇರಬೇಕಾದಷ್ಟು ಸಿಬ್ಬಂದಿಯಾದರೂ ಇರಬೇಕಲ್ಲವೇ? ಆಧ್ಯತೆಯ ಮೇಲೆ ನೀವು ಆ ಮಂಡಳಿಗಳಿಗೆ ಸಿಬ್ಬಂದಿಯವರನ್ನು ನೇಮಕ ಮಾಡಲೇಬೇಕು. ಸಿಬ್ಬಂದಿಗಳನ್ನು ನೇಮಿಸದಿದ್ದರೆ ಮ್ಯಾನ್‌ಹೋಲ್‌ಗಳನ್ನು ರಿಪೇರಿ ಮಾಡುವವರ್ಯಾರು? ಕಾಂಟ್ರಾಕ್ಟ್ ಬೇಸಿಸ್ ಮೇಲೆ ನೇಮಕಾತಿ ಮಾಡಿಕೊಳ್ಳಲೂ ಸಹ ನಮ್ಮಲ್ಲಿ ಹಣ ಇಲ್ಲ. ಗುಜರಾತ್ ಹೈಕೋರ್ಟ್‌ನವರು ನೀಡಿರುವ ಮಹತ್ವದ ತೀರ್ಪೊಂದರಲ್ಲಿ ಏನು ಹೇಳಿದ್ದಾರೆ ಎಂದರೆ, ನಗರಸಭೆ

ಯಾವುದೇ ಆದಾಯ ಮೂಲದಲ್ಲಿ ಸರ್ಕಾರ ಈ ಒಳಚರಂಡಿ ವ್ಯವಸ್ಥೆಯನ್ನು ಸರಿಪಡಿಸಬೇಕು ಎನ್ನುವಂತಹ ಮಾತನ್ನು ಅವರು ಕಟ್ಟುನಿಟ್ಟಾಗಿ ಹೇಳಿದ್ದಾರೆ. ನಾನು ಸರ್ಕಾರಕ್ಕೆ ಕೇಳುವುದಿಷ್ಟೇ, ಸರ್ಕಾರ ಯಾವುದೇ ಆದಾಯ ಮೂಲವನ್ನು ಹುಡುಕಿ, ಬೇರೆ ಯಾವುದೇ ಇಲಾಖೆಗೆ ಹೋಗತಕ್ಕಂಥ ಹಣವನ್ನು ತಮ್ಮ ಇಲಾಖೆಗೆ ಒದಗಿಸಿಕೊಂಡು ಈ ವ್ಯವಸ್ಥೆ ಸರಿಪಡಿಸಬೇಕು. ಈ 66 ಕೋಟಿ ರೂಪಾಯಿಗಳ ಜುಜುಬಿ ಮೊತ್ತ ನಿಮಗೆ ಸಾಕಾಗುವುದಿಲ್ಲ. ಕನಿಷ್ಟ 1,000 ಕೋಟಿ ರೂಪಾಯಿಗಳು ನಿಮಗೆ ಬೇಕಾಗಬಹುದು. ಏಕೆಂದರೆ ಎಲ್ಲಾ ನಗರಪಾಲಿಕೆಗಳ ಒಳಚರಂಡಿ ಮತ್ತು ನೀರು ಸರಬರಾಜು ಮಂಡಳಿಯ ಯೋಜನೆಗಳೆಲ್ಲಾ 25 ವರ್ಷಗಳ ಹಿಂದೆ ಆದಂತಹ ಯೋಜನೆಯಾಗಿವೆ. ಅದನ್ನು ನೀವು ಪನರ್ ಪರಿವರ್ತಿಸಬೇಕು ಅಥವಾ ಹೊಸ ಯೋಜನೆ ರೂಪಿಸಬೇಕು. ಅದನ್ನೇ ರಿಪೇರಿ ಮಾಡತಕ್ಕ ಪರಿಸ್ಥಿತಿಯಲ್ಲೂ ಕೂಡ ನೀವು ಇಲ್ಲ. 25 ವರ್ಷಗಳ ಹಿಂದಿನ ಜನಸಂಖ್ಯೆ ಎಷ್ಟಿತ್ತು ಈಗಿನ ಜನಸಂಖ್ಯೆ ಎಷ್ಟಿದೆ? ಜನಸಂಖ್ಯೆಗನುಗುಣವಾಗಿ ನೀವು ಸರಿಯಾಗಿ ವ್ಯವಸ್ಥೆಯನ್ನು ಮಾಡದಿದ್ದರೆ ಒಬ್ಬ ಜನ ಸಾಮಾನ್ಯನ ಆರೋಗ್ಯವನ್ನು ಕಾಪಾಡಿಕೊಂಡು ಬರುವಲ್ಲಿ ಈ ಒಳಚರಂಡಿ ಮಂಡಳಿಯಾಗಲೀ, ನಗರಸಭೆಯಾಗಲೀ ಏನು ಮಾಡಲಿಕ್ಕೆ ಸಾಧ್ಯವಿದೆ? ಆದರಿಂದಾಗಿ ಇನ್ನು ಮುಂದಿನ ದಿನಗಳಲ್ಲಿ ಯಾವುದೇ ಇಲಾಖೆಗಿಂತಲೂ ಬಹಳ ಮಹತ್ವಪೂರಿತವಾಗಿ ನಗರಾಭಿವೃದ್ಧಿ ಇಲಾಖೆ ಕೆಲಸ ಮಾಡುವಂತೆ ಮಾಡುವ ಜವಾಬ್ದಾರಿ ಅವರಲ್ಲಿದೆ. ಒಳಚರಂಡಿ ವ್ಯವಸ್ಥೆ ಈ ರೀತಿಯಾಗಿದ್ದರೆ ಇನ್ನು ನೀರು ಸರಬರಾಜು ವ್ಯವಸ್ಥೆ ಇನ್ನೊಂದು ರೀತಿಯಾಗಿದೆ. ನೀರು ಸರಬರಾಜಿನ ವ್ಯವಸ್ಥೆಯ ರೀತಿಗೂ ನಾನು ನಮ್ಮ ಉಡುಪಿ ನಗರದ ಉದಾಹರಣೆಯನ್ನೇ ಕೊಡುತ್ತೇನೆ. 1972ನೇ ಇಸವಿಯಲ್ಲಿ ಸ್ವರ್ಣಾ ನದಿಯ ಪ್ರಥಮ ಹಂತದ ಯೋಜನೆ ಆರಂಭವಾಯಿತು. 1972ನೇ ಇಸವಿಯಲ್ಲಿ ಆರಂಭವಾದ ಈ ಯೋಜನೆ 20 ವರ್ಷಕ್ಕೆ ಸೀಮಿತವಾಗಿ ಮಾಡಿದಂತಹ ಯೋಜನೆಯಾಗಿತ್ತು. ಅಂದರೆ 1992ಕ್ಕೆ ಅದರ ಯೋಜನಾ ಅವಧಿ ಮುಗಿದು ಹೋಗುತ್ತದೆ. ಆ ಯೋಜನೆಯನ್ನೇ ಹಿಡಿದುಕೊಂಡು ನಾವು ಇವತ್ತು ಉಡುಪಿ ನೀರು ಸರಬರಾಜು ವ್ಯವಸ್ಥೆ ಮಾಡಬೇಕಾಗಿದೆ. ಕಳೆದ 5-6 ವರ್ಷಗಳಲ್ಲಿ ನಮ್ಮ ನಗರಸಭೆಯ ವ್ಯವಸ್ಥೆ ಬಹಳ ಹದಗೆಟ್ಟಿದೆ. ಕೇವಲ ಉಡುಪಿ ನಗರಸಭೆಯ ವ್ಯವಸ್ಥೆ ಈ ರೀತಿ ಯಾಗಿದೆ ಎಂದಲ್ಲ, ಮಂಗಳೂರು ನಗರಪಾಲಿಕೆಯಲ್ಲೂ ಕೂಡ ಇದೇ ಅವ್ಯವಸ್ಥೆಯಾಗಿದೆ. ಬೆಂಗಳೂರು, ಮೈಸೂರು, ಹೀಗೆ ಪ್ರತಿಯೊಂದು ಕಡೆಯಲ್ಲೂ ಕೂಡ ನೀರಿನ ಕೊರತೆ ಅಷ್ಟೊಂದು ತೀವ್ರತರದಲ್ಲಿ ಇದೆ. ಕೆಲವರೆಲ್ಲಾ ನನಗೆ ಹೇಳಿದರು, ಏನ್ರೀ ಸಭಾಪತಿಯವರೇ, ನಿಮ್ಮಲ್ಲಿ ಬೇಕಾದಷ್ಟು ಮಳೆ ಬರುತ್ತದೆ, ನಿಮ್ಮಲ್ಲಿ ನೀರಿನ ಅಭಾವ ಅಂತ ಹೇಳಿದರೆ ಹೇಗೆ? ಎಂದರು. ಮಳೆ ನೀರು ಬಂದದ್ದೆಲ್ಲಾ ಸಮುದ್ರಕ್ಕೆ ಹೋಗುತ್ತದೆಯೇ ವಿನಃ ಆ ನೀರನ್ನು ಕಟ್ಟುನಿಟ್ಟಾಗಿ ಆಣೆಕಟ್ಟಿನ ರೂಪದಲ್ಲಿ ಸಂಗ್ರಹಿಸಿಡುವಂತಹ ಕೆಲಸ ಇವತ್ತು ಯಾರಿಂದಲೂ ಕೂಡ ಮಾಡಲಿಕ್ಕೆ ಆಗಲಿಲ್ಲ. ನಾವು ಎಲ್ಲಾ ಕಡೆ ಭಾಷಣಗಳನ್ನು ಮಾಡುತ್ತಲೇ ಇರುತ್ತೇವೆ. ನಾವು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಿಂದಿನಿಂದಲೂ ಕೂಡ ಮಾತನಾಡಿಕೊಂಡು ಬಂದಿದ್ದೇನೆಂದರೆ ನಬಾರ್ಡ್‌ನಿಂದಾಗಲೀ, ಜಾಗತಿಕ ಬ್ಯಾಂಕ್‌ನಿಂದಾಗಲೀ ಅಥವಾ ಯಾವುದೇ ಒಂದು ಆರ್ಥಿಕ ಮೂಲದಿಂದ ಈ ಮಳೆಗಾಲದಲ್ಲಿ ಹರಿಯತಕ್ಕಂತಹ ನೀರನ್ನು ಸಂಗ್ರಹಣೆ ಮಾಡಿ ಇಟ್ಟರೆ ಅದೇ ನೀರು ಕುಡಿಯುವ ನೀರಿಗೆ ಸಾಕಾಗುತ್ತದೆ. 1972 ನೇ ಇಸವಿಯಲ್ಲಿ ಆರಂಭವಾದಂತಹ

ಸ್ವರ್ಣಾ ನದಿಯ ಪ್ರಥಮ ಹಂತದ ಯೋಜನೆಯನ್ನು ದ್ವಿತೀಯ ಹಂತಕ್ಕೆ ತರಿಸುವುದಕ್ಕೋಸ್ಕರ 28 ಕೋಟಿ ರೂಪಾಯಿಗಳ ಅಂದಾಜು ಮೊತ್ತವೊಂದನ್ನು ತಯಾರು ಮಾಡಿ ಸರ್ಕಾರಕ್ಕೆ ಕಳುಹಿಸಿಕೊಡಲಾಗಿದೆ. ಬಗ್ಗೆ 1994ರಲ್ಲಿ ಅಧಿವೇಶನ ಪ್ರಾರಂಭವಾದಾಗಲೇ ನಾನು ಈ ಸಮಸ್ಯೆಯನ್ನು ಪ್ರಸ್ತಾಪ ಮಾಡಿದ್ದೆ. ಎರಡೂವರೆ ವರ್ಷಗಳಾದರೂ ಈ ಪ್ರಸ್ತಾಪನೆಗೆ ಮಂಜೂರಾತಿ ಸಿಕ್ಕಿಲ್ಲ. 28 ಕೋಟಿ ರೂಪಾಯಿಗಳ ಅಂದಾಜಿನ ಈ ಯೋಜನೆ ಈಗ40 ಕೋಟಿ ರೂಪಾಯಿಗಳಿಗೆ ಪರಿಷ್ಕರಣೆಯಾಗಿದೆ. ಈ ರೀತಿ ವರ್ಷ ವರ್ಷ ಕಳೆದ ಹಾಗೆ ಈ ಅಂದಾಜಿನ ಮೊತ್ತ ಜಾಸ್ತಿಯಾಗುತ್ತಾ ಹೋಗುವುದರಿಂದಾಗಿ ಈ 40 ಕೋಟಿ ರೂಪಾಯಿಗಳ ಅಂದಾಜಿಗೆ ಆಗುವಂತಹ ಯೋಜನೆಯನ್ನು ಈ ವರ್ಷವೂ ನೀವು ರೂಪಿಸದೇ ಹೋದಲ್ಲಿ ಬರುವ ವರ್ಷಕ್ಕಂತೂ ಖಂಡಿತ ನೀರಿನ ಕ್ಷಾಮದಿಂದ ನಾವು ತುಂಬಿ ಹೋಗುತ್ತೆವೆ. ಇವತ್ತು ದೊಡ್ಡ ದೊಡ್ಡ ಯೋಜನೆಗಳನ್ನು ಮಾಡಲಿಕ್ಕೆ ನಿಮಗೆ ಆಗುವುದಿಲ್ಲ, ಆ ವಿಚಾರ ಬಿಡಿ. ಕನಿಷ್ಪ ಪಕ್ಷ ನೀರು ಸರಬರಾಜು ಮಂಡಳಿಗಳು ತಮ್ಮ ವ್ಯಾಪ್ತಿಗೆ ಎಲ್ಲೆಲ್ಲಿ ಸಣ್ಣ ಪುಟ್ಟ ಕೆರೆಗಳು ಬರುತ್ತವೆಯೋ ಅಂತಹ ಕಡೆಗಳಲ್ಲಿ ಕಿರು ನೀರಿನ ಸರಬರಾಜು ಕೇಂದ್ರಗಳನ್ನಾದರೂ ಮಾಡಲಿಕ್ಕೆ ನೀವು ಪ್ರಯತ್ನ ಮಾಡಿ. ನಾನು ನಿಮ್ಮ ಹತ್ತಿರ ಅದನ್ನೇ ಕೇಳಿದೆ. ಈ 40 ಕೋಟಿ ರೂಪಾಯಿಗಳ ಮರು ಪರಿಶೀಲಿಸಲಾದ ಅಂದಾಜನ್ನು ನಿಮಗೆ ಕಳುಹಿಸಿಕೊಟ್ಟಾಗ ನೀವು ಅದನ್ನು ಹುಡ್ಕೋ ಮೂಲಕ ಸಾಲ ಪಡೆಯಿರಿ ಎಂದು ಹೇಳಿ ಪತ್ರ ಬರೆದು ಈಗ ನಮಗೆ ಸಲಹೆ ಕೊಟ್ಟಿದ್ದೀರಿ. ಅದು ಹುಡ್ಕೋದಿಂದ ಮಂಜೂರಾತಿಯಾಗಲಿಕ್ಕೆ ಒಂದು ವರ್ಷ ಬೇಕು, ಕಾರ್ಯಗತ ಮಾಡಲಿಕ್ಕೆ ಇನ್ನೂ ನಾಲ್ಕು ವರ್ಷಗಳು ಬೇಕು. ಆಗ ಪುನಃ ಜನಸಂಖ್ಯೆ ಹೆಚ್ಚಾಗಿರುತ್ತದೆ. ಈಗಿರತಕ್ಕ ನೀರು ಸರಬರಾಜು ಯೋಜನೆಯಲ್ಲಿ ನಮಗೆ ಸಾಕಾಗುತ್ತಿಲ್ಲ. ಅದಕ್ಕಾಗಿ ನಾನು ಹೇಳುವುದೇನೆಂದರೆ, ಎಲ್ಲೆಲ್ಲಿ ನಗರ ಸರಬರಾಜು ಮಂಡಳಿಗಳಿಂದ ನಗರಸಭೆಗಳಿಗೆ ಹಸ್ತಾಂತರ ಆಗಿದೆ ಅಂತಹ ನಗರಸಭೆಗಳಿಗೆ ವಿಶೇಷವಾಗಿ ಒಳಚರಂಡಿ ವ್ಯವಸ್ಥೆ ಮತ್ತು ನೀರು ಸರಬರಾಜು ವ್ಯವಸ್ಥೆಯನ್ನು ಸುಗಮಗೊಳಿಸಲಿಕ್ಕೋಸ್ಕರ ಕನಿಷ್ಪ 1 ಕೋಟಿ ರೂಪಾಯಿಗಳ ವಿಶೇಷ ಅನುದಾನವನ್ನು ನೀವು ಬಿಡುಗಡೆ ಮಾಡಿದರೆ ನಾವು ಅದರ ಮೂಲಕವಾದರೂ ಈ ಸಮಸ್ಯೆಯನ್ನು ತಾತ್ಕಾಲಿಕವಾಗಿ ಬಗೆಹರಿಸಲಿಕ್ಕೆ ನಮಗೆ ಸಾಧ್ಯವಾಗುತ್ತಿತ್ತು ಎನ್ನುವಂತಹ ನನ್ನ ಭಾವನೆಯನ್ನು ಇಲ್ಲಿ ನಾನು ಹೇಳಬಯಸುತ್ತೇನೆ. ಆ ಒಂದು ಕೋಟಿ ರೂಪಾಯಿಗಳ ವಿಶೇಷ ಅನುದಾನವನ್ನು ತಾವು ನಗರಸಭೆಗೆ ಕೊಟ್ಟರೆ ನಾವು ಅಲ್ಲಲ್ಲಿ ಇರತಕ್ಕಂತಹ ಸಣ್ಣ ಸಣ್ಣ ಕೆರೆಗಳು, ನಾಲೆಗಳು, ಕೊಳಗಳು ಏನಿವೆ ಅವುಗಳನ್ನು ಡೆವಲಪ್ ಮಾಡಿ ಅಲ್ಲಿರತಕ್ಕಂಥ ನೀರಿನ ಸೋರ್ಸ್ ಅನ್ನು ಯೂಟಿಲೈಸ್ ಮಾಡಿ ಆಯಾಯಾ ವಾರ್ಡ್‌ವೈಸ್ ಏನಾದರೂ ನೀರು ಕೊಡಲಿಕ್ಕೆ ಆಗುತ್ತದೆಯೇ? ಎಂದು ನೋಡಿ ಆ ಒಂದು ಕೆಲಸವನ್ನು ನಾವು ಮಾಡಬಹುದು. ನೀವು ಕೇವಲ ಈ ಯೋಜನೆಗಳನ್ನೇ ನಂಬಿಕೊಂಡು, ಯಾವುದೋ ಒಂದು ಜಪಾನಿ ಸಂಸ್ಥೆ ಅಥವಾ ಯಾವುದೋ ಒಂದು ಆರ್ಥಿಕ ಸಂಸ್ಥೆ ನಮಗೆ ಸಾಲ ಕೊಡಬಹುದು ಎಂದುಕೊಂಡರೆ ಆಗುವುದಿಲ್ಲ. ನಾನು ನಿಮಗೊಂದು ಉದಾಹರಣೆ ಹೇಳುತ್ತೇನೆ. ಆ ಜಪಾನ್ ಸಂಸ್ಥೆಯ ಅಧಿಕಾರಿಗಳು ನಮ್ಮಲ್ಲಿಗೆ ಅಧ್ಯಯನ ಮಾಡಲಿಕ್ಕೆ ಬಂದಿದ್ದರು. ಅವರ ಹಿಂದೆ ನಮ್ಮ ಜಿಲ್ಲಾಧಿಕಾರಿಗಳು, ಆಯುಕ್ತರುಗಳು 3-4 ದಿವಸ ಓಡಾಡಿ ತಿಂಗಳುಗಟ್ಟಲೆ ನಾವು ಅಧ್ಯಯನ ಮಾಡಿ ಅಲ್ಲಿ ಶಿಫಾರಸ್ಸು ಮಾಡಿ ಕಳುಹಿಸಿದೆವು. ನಾನು ಕಳುಹಿಸಿಕೊಟ್ಟ ಒಂದು ವರ್ಷವಾದ ಮೇಲೆ ಕಳೆದ ಮೇ ತಿಂಗಳಿನಲ್ಲಿ ಇದು ಆಗುವುದಿಲ್ಲ ಎಂದು

ನಮಗೆ ಪತ್ರ ಬಂದಿದೆ. ಅವರಿಗೆ ಮೊದಲೇ ಇದು ಆಗುವುದಿಲ್ಲ ಎಂದು ಗೊತ್ತಿರಲಿಲ್ಲವೇ? ನಾವು ಕಷ್ಟಪಟ್ಟು ಅಧಿಕಾರಿಗಳನ್ನು ಕಳುಹಿಸಿ ದಿವಸವಿಡೀ ಅದರ ಬಗ್ಗೆ ಅಧ್ಯಯನ ಮಾಡಿಸಿ, ನಾವು ಏನೋ ಒಂದು ಆಸೆಯಲ್ಲಿ ಆಗುತ್ತದೆ ಅಂತ ಹೇಳಿದರೆ ನೀವು ಮೇ ತಿಂಗಳಲ್ಲಿ ಪತ್ರ ಬರೆದು ಈ ಯೋಜನೆ ನಮಗೆ ಖಂಡಿತಾ ಆಗುವುದಿಲ್ಲ, ಹುಡ್ಕೋ ಯೋಜನೆಯಲ್ಲಿ ನೀವು ಸಾಲ ಪಡೆಯಬೇಕು ಎಂದು ಹೇಳಿದ್ದೀರಿ. ಅದು ಮೊದಲೇ ನಮಗೆ ಗೊತ್ತಿದ್ದರೆ ಹುಡ್ಕೋ ಅಧ್ಯಕ್ಷರೊಂದಿಗೆ ನಾವೇ ಮಾತುಕತೆ ನಡೆಸಿ ನಾವು ಏನಾದರೂ ಒಂದು ಯೋಜನೆಯನ್ನು ರೂಪಿಸಲಿಕ್ಕೆ ಪ್ರಯತ್ನ ಪಡುತ್ತಿದ್ದೆವು. ಆದ್ದರಿಂದ ಮಾನ್ಯ ಉಪಾಧ್ಯಕ್ಷರೇ, ತಮ್ಮ ಮೂಲಕ ನಾನು ಸರ್ಕಾರದ ಮಂತ್ರಿಗಳನ್ನು ಕೇಳುವುದೇನೆಂದರೆ, ವಿಶೇಷವಾಗಿ ಉಡುಪಿ, ಮಂಗಳೂರಿನಂತಹ ಪ್ರದೇಶಗಳಲ್ಲಿ ಸಾಂಕ್ರಾಮಿಕ ರೋಗಗಳು ಹಬ್ಬುವುದಕ್ಕಿಂತ ಮೊದಲು ನೀವು ನಮಗೆ ಆ ಒಳಚರಂಡಿ ವ್ಯವಸ್ಥೆಯನ್ನು ರಿಪೇರಿ ಮಾಡಲಿಕ್ಕೆ ಹಾಗೂ ನೀರು ಸರಬರಾಜಿಗೆ ಹೆಚ್ಚಿನ ರೀತಿಯಲ್ಲಿ ಅಲ್ಲಲ್ಲಿ ಬೋರ್‌ವೆಲ್‌ಗಳನ್ನು ಹಾಕಿಸುವಂತಹ ವ್ಯವಸ್ಥೆಗೋಸ್ಕರ ವಿಶೇಷವಾಗಿ ಒಂದೊಂದು ಕೋಟಿ ರೂಪಾಯಿಗಳ ಅನುದಾನವನಾದರೂ ನೀವು ಬಿಡುಗಡೆ ಮಾಡಲೇಬೇಕು. ಈ ವರ್ಷದಲ್ಲಿ ನಮಗೆ ಆ ಹಣವನ್ನು ತಾವು ಬಿಡುಗಡೆ ಮಾಡಬೇಕು ಎಂದು ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೆ, ನಾನು ಈಗ ಮುಖ್ಯವಾಗಿ ನಗರಾಭಿವೃದ್ಧಿ ಪ್ರಾಧಿಕಾರಿಗಳ ಬಗ್ಗೆ ಹೇಳಬಯಸುತ್ತೇನೆ. ಇವತ್ತು ಅನೇಕ ಮುನಿಸಿಪಾಲಿಟಿಗಳ ಸರಹದ್ದಿನಲ್ಲಿ ನಗರಾಭಿವೃದ್ಧಿ ಪ್ರಾಧಿಕಾರಗಳನ್ನು ಸರ್ಕಾರ ನೇಮಕ ಮಾಡಿದೆ. ಈ ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ನೀವು ಏನು ವ್ಯವಸ್ಥೆಯನ್ನು ಮಾಡಿದ್ದೀರಿ ಎಂದರೆ ನಗರದ ಜನರಿಂದ ಅಭಿವೃದ್ಧಿ ಶುಲ್ಕವನ್ನು ತೆಗೆದುಕೊಳ್ಳುತ್ತಿದ್ದೀರಿ, ಆದರೆ ಅಭಿವೃದ್ಧಿ ಶುಲ್ಕದ ಹೆಸರಿನಲ್ಲಿ ಪ್ರಾಧಿಕಾರಕ್ಕೆ ಬಂದಿರತಕ್ಕ ಹಣವನ್ನು ಯೋಗ್ಯವಾದ ರೀತಿಯಲ್ಲಿ ಅದೇ ಪ್ರಾಧಿಕಾರಕ್ಕೆ ವ್ಯವಸ್ಥಿತವಾದ ರೀತಿಯಲ್ಲಿ ಯೋಜನೆಗಳನ್ನು ರೂಪಿಸಲಿಕ್ಕೆ ಮಂಜೂರು ಮಾಡಬೇಕೆಂದು ನನ್ನ ಬೇಡಿಕೆ. ಏಕೆಂದರೆ ಇವತ್ತು ನನ್ನ ಕ್ಷೇತ್ರಗಳಾದ ಉಡುಪಿ ಮತ್ತು ಮಲ್ಪೆಗಳಲ್ಲೂ ಈ ನಗರಾಭಿವೃದ್ಧಿ ಪ್ರಾಧಿಕಾರಗಳಿದ್ದು, ಅದರಲ್ಲಿ ಒಂದು ಕೋಟಿ ಹಣ ಅಭಿವೃದ್ಧಿ ಶುಲ್ಕದ ಮೂಲಕ ಸಂಗ್ರಹಣೆಯಾಗಿದೆ. ಆದರೆ ಜಿಲ್ಲಾಧಿಕಾರಿಗಳು ಪ್ರಾಧಿಕಾರದ ಅಧ್ಯಕ್ಷರಾಗಿದ್ದಾಗ, ಅವರ ಬಳಿ ಅತ್ತೂ ಕರೆದು ಬಹಳಷ್ಟು ಕಾಡಿಬೇಡಿ ಹತ್ತರಿಂದ ಇಪ್ಪತ್ತೈದು ಲಕ್ಷದಷ್ಟು ಹಣವನ್ನು ಒಳಚರಂಡಿ ರಿಪೇರಿಗೆಂದು ಪಡೆದಿರಿ, ಅಭಿವೃದ್ಧಿ ಶುಲ್ಕದಿಂದ ಸಂಗ್ರಹವಾಗಿರತಕ್ಕ ಒಂದು ಕೋಟಿ ಹಣವನ್ನು ನೀವು ಸರ್ಕಾರಕ್ಕೆ ಕೊಡಿ ಎಂದು ಕೇಳುತ್ತಿರಲ್ಲಾ, ನೀವು ಅದನ್ನು ಯಾವ ಆಧಾರದ ಮೇಲೆ ಕೇಳುತ್ತೀರೆಂದು ನನಗೆ ಅರ್ಥವಾಗುವುದಿಲ್ಲ. ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಅನುದಾನವನ್ನು ಕೊಡದೆ, ಸಂಗ್ರಹವಾಗಿರತಕ್ಕ ಅಭಿವೃದ್ಧಿ ಶುಲ್ಕವನ್ನು ಪಡೆದುಕೊಳ್ಳುವುದಾದರೆ ಈ ಪ್ರಾಧಿಕಾರ ಅಸ್ತಿತ್ವದಲ್ಲಿದ್ದುಕೊಂಡು ಏನು ಪ್ರಯೋಜನ? ಅದಕ್ಕೋಸ್ಕರ ತಮ್ಮ ಹತ್ತಿರ ಬೇಡಿಕೊಳ್ಳುವುದೇನೆಂದರೆ, ಸಂಗ್ರಹವಾಗಿರತಕ್ಕ ಅಭಿವೃದ್ಧಿ ಶುಲ್ಕವನ್ನು ಠೇವಣಿ ಇಡದೆ, ಅದಕ್ಕೆ ಒಂದು ವಿಶೇಷವಾದ ಯೋಜನೆಯನ್ನು ರೂಪಿಸಿ ದಯವಿಟ್ಟು ನಗರಾಭಿವೃದ್ಧಿ ಮಾಡುವುದಕ್ಕೋಸ್ಕರ ನೀರು ಸರಬರಾಜು, ಒಳಚರಂಡಿ ಅವ್ಯವಸ್ಥೆಯನ್ನು ನಿವಾರಿಸಲಿಕ್ಕೆ ಅಥವಾ ಒಂದು ಬಸ್ ನಿಲ್ದಾಣ ಮಾಡಲಿಕ್ಕೆ, ಅಥವಾ ಒಂದು ಡಂಪಿಂಗ್ ಯಾರ್ಡ್ ನಿರ್ಮಾಣ ಮಾಡಲಿಕ್ಕೆ ಈ ಹಣವನ್ನು ಮಂಜೂರು ಮಾಡಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೂಡ ನಗರಾಭಿವೃದ್ಧಿ ಪ್ರಾಧಿಕಾರದ ಸದಸ್ಯರಾಗಿದ್ದಾರೆ. ನಗರಾಭಿವೃದ್ಧಿ ಪ್ರಾಧಿಕಾರವು ಯಾವುದೇ ಲಾಭ ನಷ್ಟ ಇಲ್ಲದೆ ನಡೆಯತಕ್ಕ ಒಂದು ಸಂಸ್ಥೆ. All the urban Development authorities are autonomous on their own. ಆ ಹಣವನ್ನು ಅವರು ಯಾವುದೇ ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗ ಮಾಡಿಕೊಳ್ಳಬಹುದು. They can take up any development work within their jurisdiction. 20 ಜಿಲ್ಲೆಗಳಲ್ಲಿ ಇರತಕ್ಕ ಈ ಪ್ರಾಧಿಕಾರಗಳು ಅವರ ಹಣವನ್ನು ಅವರೇ ಯಾವುದಾದರೂ ಯೋಜನೆಗಳನ್ನು ರೂಪಿಸಿಕೊಂಡು, ಆ ಹಣವನ್ನು ಉಪಯೋಗಿಸಿಕೊಳ್ಳಬಹುದು. ಅದರಲ್ಲಿ ಸರ್ಕಾರ ತನ್ನ ಹಸ್ತಕ್ಷೇಪ ಮಾಡುವುದಿಲ್ಲ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸಚಿವರಿಗೆ ನಾನು ಮನದಟ್ಟು ಮಾಡಬೇಕಾಗಿದೆ. ಈ ಹಿಂದೆ ನಮ್ಮ ಉಡುಪಿ, ಮಲ್ಪೆ ನಗರಾಭಿವೃದ್ಧಿ ಪ್ರಾಧಿಕಾರದಿಂದ ಪಡೆದಿರತಕ್ಕ 30 ಲಕ್ಷ ಹಣವನ್ನು ಇನ್ನೂ ವಾಪಸ್ಸು ಕೊಟ್ಟಿಲ್ಲ. ಅದೇ ಎರಡು ವರ್ಷಗಳ ಹಿಂದೆ ತೇವಣಿ ಇಟ್ಟಿರತಕ್ಕ 80 ಲಕ್ಷ ನಗರಾಭಿವೃದ್ಧಿ ಪ್ರಾಧಿಕಾರದ ಹಣವನ್ನು ಕೂಡಲೇ ಸರ್ಕಾರದ ಖಜಾನೆಗೆ ಕಳುಹಿಸಿ ಕೊಡಿ ಎಂದು ಎಷ್ಟೋ ಸಲ ಜಿಲ್ಲಾಧಿಕಾರಿಗಳಿಗೆ ಆದೇಶ ಬಂತು. ಆದರೆ ಜಿಲ್ಲಾಧಿಕಾರಿಗಳು ಕಟ್ಟುನಿಟ್ಟಾಗಿ ಅದು ನಮ್ಮ ಕ್ಷೇತ್ರದ ಕಾರ್ಯಗಳಿಗಾಗಿ ಇಟ್ಟಿರತಕ್ಕ ಹಣ ಕೊಡುವುದಕ್ಕೆ ಆಗುವುದಿಲ್ಲ ಎಂದು ಒತ್ತಾಯ ಮಾಡಿದ್ದರಿಂದ ಅದು ಹಾಗೆಯೇ ಉಳಿದಿದೆ. ನೀವು ಸರ್ಕಾರ ಇದರಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ ಎಂದು ಹೇಳಿದ್ದರಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಈ ಮೂಲಕ ಪಡೆದಂತಹ 30 ಲಕ್ಷರೂಗಳ ಹಣವನ್ನು ಇನ್ನೂ ಪ್ರಾಧಿಕಾರಕ್ಕೆ ವಾಪಸ್ಸು ಕೊಟ್ಟಿಲ್ಲ ಎಂಬುದನ್ನು ನಾನು ತಮಗೆ ಮನವರಿಕೆ ಮಾಡುತ್ತಿದ್ದೇನೆ. ಆದುದರಿಂದ ಪ್ರಾಧಿಕಾರವನ್ನು ಇನ್ನೂ ಒಳ್ಳೆಯ ರೀತಿಯಲ್ಲಿ ಮಾಡಲಿಕ್ಕೆ ಸಾಧ್ಯವಿದೆ. ಇವತ್ತು ನಾವೆಲ್ಲ ಪ್ರಾಧಿಕಾರಕ್ಕೆ ಅಧ್ಯಕ್ಷರನ್ನು ನೇಮಕಾತಿ ಮಾಡಿದ್ದೇವೆ. ನಾವು ಮತ್ತು ಅಧ್ಯಕ್ಷರು ಎಲ್ಲ ಒಟ್ಟು ಸೇರಿಕೊಂಡು ಯಾವುದೇ ತೀರ್ಮಾನ ತೆಗೆದುಕೊಳ್ಳ ಬೇಕಾದರೂ ಮಂಜೂರಾತಿಯ ಬಗ್ಗೆ ಕ್ಷೀಪ್ರವಾಗಿ ಕ್ರಮ ಕೈಗೊಳ್ಳಬೇಕೆಂಬುದನ್ನು ನಾನು ನಗರಾಭಿವೃದ್ಧಿ ಸಚಿವರಲ್ಲಿ ಹೇಳುತ್ತೇನೆ. ಅಲ್ಲದೆ, ಇನ್ನು ಮುಂದಿನ ದಿನಗಳಲ್ಲಿ ತಾವು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕೆಂದು ಹೇಳುತ್ತೇನೆ. ಆದರೆ ನೀವು ಹಾಗೆ ಮಾಡಬೇಕಾದರೆ ಮಾನ್ಯ ಮುಖ್ಯಮಂತ್ರಿಗಳು ಅನುದಾನವನ್ನು ಕೊಡಬೇಕಾಗುತ್ತದೆ. ಮಾನ್ಯ ಅರ್ಥ ಮಂತ್ರಿಗಳು ಇಲ್ಲಿ ಇಲ್ಲ, ಅವರಿದ್ದಿದ್ದರೆ ಅವರಿಗೆ ಮನದಟ್ಟಾಗುವಂತೆ ನಾನು ಹೇಳುತ್ತಿದ್ದೆ. ಏಕೆಂದರೆ ನಾವು ಇವತ್ತು ಆ ಕ್ಷೇತ್ರದ ಜನರಿಗೆ ಕೊಟ್ಟಂತಹ ವಚನವನ್ನು ಪಾಲಿಸಲಿಕ್ಕೆ ಆಗುವುದಿಲ್ಲ. ನೀರು ಕೊಡುತ್ತೇವೆ ಎಂದು ಹೇಳಿದೆವು ಆದರೆ ನೀರು ಕೊಡಲಿಕ್ಕೆ ಆಗುತ್ತಿಲ್ಲ. ಆದರೂ ನೀರಿನ ಶುಲ್ಕವನ್ನು ಏರಿಸಿದ್ದೇವೆ. ಪುರಸಭೆಯನ್ನು ನಗರಸಭೆಯನ್ನಾಗಿ ಮಾಡಿದ್ದೇವೆ. ಮನೆಗಳ ಮೇಲಿನ ಶುಲ್ಕವನ್ನು 6 ರಿಂದ 20 ಪರ್ಸೆಂಟ್ ಏರಿಸಿದ್ದೇವೆ ಆದರೂ ನಮಗೆ ಏನೂ ಮಾಡಲಿಕ್ಕೆ ಆಗುತ್ತಿಲ್ಲ. ಕೋಟಿಗಟ್ಟಲೆ ಹಣ ಖರ್ಚಾಗುವ ಈ ಯೋಜನೆಯನ್ನು ಜಾರಿಗೆ ತರಬೇಕಾದರೆ ಏನಾದರೂ ಮಾಡಿ, ಜಗಳವನ್ನಾದರೂ ಮಾಡಿ ವಿಶೇಷ ಅನುದಾನವನ್ನು ಕೊಡಿಸಬೇಕೆಂದು ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ವಸತಿ ಸಚಿವರ ಖಾತೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳ

ಬಯಸುತ್ತೇನೆ. ಮಾನ್ಯ ವಸತಿ ಸಚಿವರು ಸಾಕಷ್ಟು ಕೆಲಸಗಳನ್ನು ಮಾಡಿದ್ದಾರೆ, ಇಲ್ಲ ಎಂದು ನಾನು ಹೇಳುವುದಿಲ್ಲ. ಆದರೆ ನೀವು ಕೊಡತಕ್ಕ ಮನೆಗಳು ನಮಗೆ ಸಾಲುವುದಿಲ್ಲ. ಏಕೆಂದರೆ ಒಂದು ವಿಧಾನಸಭಾ ಕ್ಷೇತ್ರಕ್ಕೆ 1000 ಮನೆಗಳನ್ನು ಆಶ್ರಯ ಯೋಜನೆಯಡಿಯಲ್ಲಿ ನಿಗದಿ ಮಾಡಿದೆ. ಆದರೆ ಇದು ಎಲ್ಲಿಗೆ ಮುಟ್ಟಿದೆ ಎಂದರೆ ಇವತ್ತು ಗ್ರಾಮಪಂಚಾಯಿತಿಗೆ ಒಂದು ಮನೆಯನ್ನೂ ಸಹ ಕೊಡಲಿಕ್ಕೆ ಆಗುತ್ತಿಲ್ಲ. ನಾವು ಗ್ರಾಮಸಭೆಗಳನ್ನು ಕರೆಯುತ್ತೇವೆ, ಗ್ರಾಮ ಸಭೆಯ ಅಧ್ಯಕ್ಷರು ಗ್ರಾಮಸಭೆಯನ್ನು ಕರೆಯಿಸಿ ಡಂಗುರ ಹೊಡೆಸುತ್ತಾರೆ, ನಾವು ಗ್ರಾಮ ಸಭೆಯನ್ನು ಕರೆಯುತ್ತಿದ್ದೇವೆ ನಿಮ್ಮ ಬೇಡಿಕೆಗಳೇನು ಎಂದು ಜನರನ್ನು ಕೇಳುತ್ತಾರೆ. ಆಶ್ರಯದಲ್ಲಿ 250 ಮನೆಗಳು ಬಂದಿವೆ. ಆದರೆ ಇಡೀ ತಾಲ್ಲೂಕಿಗೆ ನಾವು 55-60 ಮನೆಗಳನ್ನು ಕೊಟ್ಟರೆ, ಒಂದು ಗ್ರಾಮ ಪಂಚಾಯಿತಿಗೆ ಒಂದು ಮನೆ ವಿಂಗಡನೆ ಆಗಿ ಬರುತ್ತದೆ, ಅದು ಎಲ್ಲಿ ಸಾಕಾಗುತ್ತದೆ? ನಾವು ಆರ್ಥಿಕವಾಗಿ ಹಿಂದುಳಿದಿರತಕ್ಕಂಥ ಗ್ರಾಮಾಂತರ ಪ್ರದೇಶದ ಜನರಿಗೆ ನಿವೇಶನಗಳನ್ನು ಕೊಡುವುದಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ. ಅದರಲ್ಲಿ ಹಿಂದೇಟು ಹಾಕಲು ಸಾಧ್ಯವಿಲ್ಲ. ಆದುದರಿಂದ ತಾವು ತಮ್ಮ ಪ್ರಭಾವ ಬೀರಿ ತಮ್ಮ ಖಾತೆಗೆ ಇನ್ನಷ್ಟು ಹಣವನ್ನು ತರಿಸುವುದರಲ್ಲಿ ಯಶಸ್ವಿಯಾದರೆ, ನಮಗೆ ಒಂದೊಂದು ವಿಧಾನಸಭಾ ಕ್ಷೇತ್ರಕ್ಕೆ ಕನಿಷ್ಠ ಸಾವಿರ ಮನೆಗಳನ್ನು ಒದಗಿಸಿಕೊಟ್ಟರೆ ನಿಮ್ಮ ಸಚಿವ ಪದವಿಗೂ ಒಂದು ಗೌರವ ಬರುತ್ತದೆ. ನಾವು ಸಚಿವರಾಗಿದ್ದಾಗ ಇಷ್ಟು ಮನೆಗಳನ್ನು ಕೊಟ್ಟೆವು ಎಂದು ನೀವು ಹೇಳಿಕೊಳ್ಳಬಹುದು. ನಿಮಗೆ ಆ ತಾಕತ್ತು ಬರಬೇಕಾದರೆ ಮುಖ್ಯಮಂತ್ರಿಗಳಿಂದ ಮತ್ತು ಕೇಂದ್ರದಿಂದ ಇದಕ್ಕೋಸ್ಕರ ಹಣವನ್ನು ಪಡೆಯಬೇಕಾಗುತ್ತದೆ. ನಿಮ್ಮ ಪ್ರಭಾವವನ್ನು ಬೀರಿ ಹಣ ಪಡೆಯಬೇಕಾಗುತ್ತದೆ. ಈಗ ಕೇಂದ್ರದಲ್ಲೂ ನಿಮ್ಮ ಸರ್ಕಾರ ಇದೆ, ಮುಖ್ಯಮಂತ್ರಿಗಳು ನಿಮ್ಮವರಿದ್ದಾರೆ, ನೀವು ಇನ್ನು ಹಣ ತರಿಸಬಹುದು. ಬರುವ ಚುನಾವಣೆಯಲ್ಲಿ ನಾವು ಇಷ್ಟು ಮನೆಗಳನ್ನು ಕೊಟ್ಟಿದ್ದೇವೆ ಎಂದು ನೀವು ಹೇಳಿಕೊಳ್ಳಬಹುದು. ಇಲ್ಲ ಅಂದರೆ ಇವರು ಮನೆಗಳನ್ನೇ ಕೊಟ್ಟಿಲ್ಲ ಎಂದು ನಾವು ಹೇಳುತ್ತೇವೆ, ನೀವು ಈಗ ಇನ್ನೊಂದು ಕೆಲಸ ಮಾಡಿದ್ದೀರಿ ಏನೆಂದರೆ ಕಂದಾಯ ಇಲಾಖೆಯ ತಹಸೀಲ್ದಾರರಿಗೆ ನಿವೇಶನವನ್ನು ಕೊಡುವ ಅಧಿಕಾರ ಇತ್ತು, ಈಗ ಅದನ್ನು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಗೆ ಕೊಟ್ಟಿದ್ದೀರಿ. ಆದರಿಂದಾಗಿ ಈಗ ನಿವೇಶಗಳನ್ನು ಕೊಡುವಾಗ ಎರಡು ಪ್ರೊಸೆಸಿಂಗ್ ಆಗಬೇಕು. ಒಂದು, ಕಂದಾಯ ಇಲಾಖೆಯವರು ಜಾಗವನ್ನು ಹುಡುಕಬೇಕು, ಆ ಜಾಗವನ್ನು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಗೆ ಹಸ್ತಾಂತರ ಮಾಡಬೇಕು. ಇದರಿಂದ ಎಷ್ಟು ಡಿಲೇ ಆಗುತ್ತಿದೆ. ನಾನು ನಿಮ್ಮ ಹತ್ತಿರ ಕೇಳುತ್ತಿದ್ದೇನೆ ನೀವು ಇಡೀ ವರ್ಷದಲ್ಲಿ ನಿಮ್ಮ ಇಲಾಖೆಗೆ ಸಂಬಂಧಪಟ್ಟ ಬೇರೆ ಬೇರೆ ತಾಲ್ಲೂಕು ಪಂಚಾಯಿತಿಗಳ ಅಧ್ಯಯನ ಮಾಡಿದ್ದರೆ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಕಂದಾಯ ಇಲಾಖೆಯಿಂದ ಎಷ್ಟು ಜಾಗವನ್ನು ಪಡೆದುಕೊಂಡಿದ್ದಾರೆ, ಅದನ್ನು ಎಷ್ಟು ಗ್ರಾಮಾಂತರ ಪ್ರದೇಶಗಳ ಜನರಿಗೆ ವಿತರಣೆ ಮಾಡಿದ್ದಾರೆ ಎನ್ನುವ ಒಂದು ಸ್ಟಾಟಿಸ್ಟಿಕ್ಸ್ ನಿಮಗೆ ಸಿಗುತ್ತಿತ್ತು. ಆದುದರಿಂದ ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ, ತಾವು ದಯವಿಟ್ಟು ಹಿಂದೆ ಇದ್ದಂತೆ ನಿವೇಶನ ವಿಂಗಡಣೆ ಮಾಡುವ ಕೆಲಸವನ್ನು ಕಂದಾಯ ಇಲಾಖೆಯ ಅಧಿಕಾರಿಗಳಿಗೆ ಕೊಟ್ಟುಬಿಡಿ. ಏಕೆಂದರೆ ಎರಡು ವರ್ಷಗಳಿಂದ ಇವತ್ತು ನಿವೇಶನ ರಹಿತರಿಗೆ ನಿವೇಶನ ಎಂದು ಏನು

ಹೇಳುತ್ತಿದ್ದೇವೆ ಹಾಗೆ ಕೊಡಲಿಕ್ಕೆ ಆಗುತ್ತಿಲ್ಲ. ಎಲ್ಲಿಯೂ ಜಾಗ ಇಲ್ಲ ಎಂದು ಹೇಳುತ್ತಾರೆ, ಇದ್ದ ಕಡೆ ಜಾಗವನ್ನು ಕೊಡುವುದಿಲ್ಲ. ಅಲ್ಲದೆ ಆಶ್ರಯ, ಅಂಬೇಡ್ಕರ್ ಮತ್ತು ಇಂದಿರಾ ಆವಾಸ್ ಮನೆಗಳ ಕಾರ್ಯಕ್ರಮವನ್ನು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಮಾಡಬೇಕೆಂದು ಹೇಳುತ್ತೇನೆ. ಈ ನಗರಾಭಿವೃದ್ಧಿ ಮತ್ತು ವಸತಿ ಇಲಾಖೆಯ ಬೇಡಿಕೆಯನ್ನು ನಾನು ಸಂಪೂರ್ಣವಾಗಿ ವಿರೋಧ ಮಾಡುತ್ತೇನೆ. ಇನ್ನು ಮುಂದಿನ ವರ್ಷ ಈ ಎರಡು ಇಲಾಖೆಗಳು ಮುಖ್ಯವಾಗಿ ಗ್ರಾಮಾಂತರ ಪ್ರದೇಶದ ಜನರಿಗೆ ಬೇಕಾದ ಸೌಲಭ್ಯಗಳನ್ನು ಕೊಡುವುದರಲ್ಲಿ ಬಹಳ ಮಹತ್ತರವಾದ ಹೆಜ್ಜೆ ಇಡತಕ್ಕ ಕೆಲಸ ಮಾಡಬೇಕು. ಈ ಇಲಾಖೆಯ ಬೇಡಿಕೆಗಳಿಗೆ ಅನುದಾನ ಕೊಟ್ಟಿರುವುದು ಒಂದು ಜುಜುಬಿ ಮೊತ್ತವಾಗಿದೆ. ಆದುದರಿಂದ ಈ ಇಲಾಖೆಗೆ ಹಣ ಕೊಡುವುದರಲ್ಲಿ ಮಾನ್ಯ ಮುಖ್ಯಮಂತ್ರಿಗಳು, ಹಾಗೂ ಅರ್ಥಸಚಿವರು ಸಂಬಂಧಪಟ್ಟ ಇಲಾಖೆಗಳ ಮುಖ್ಯಸ್ಥರು ಇದರ ಬಗ್ಗೆ ಗಮನ ಹರಿಸಬೇಕು. ಮುಂದಿನ ವರ್ಷದಲ್ಲಾದರೂ ನೀವು ಅನುದಾನವನ್ನು ವಿಂಗಡನೆ ಮಾಡುವಾಗ ಈ ಅಧಿಕಾರಿಗಳ ಅವೈಜ್ಞಾನಿಕ ಅಂಕಿಸಂಖ್ಯೆಗಳ ಆಧಾರದ ಮೇಲೆ ವಿಂಗಡಣೆ ಮಾಡಲಿಕ್ಕೆ ಬಿಡಬೇಡಿ. ನೀರು ಸರಬರಾಜು ಒಳಚರಂಡಿ ವ್ಯವಸ್ಥೆ ಇದನ್ನೆಲ್ಲಾ ಮಾಡಿಸಲಿಕ್ಕೆ ನಗರಾಭಿವೃದ್ಧಿ ಸಚಿವರಿಗೆ ಕೋಟಿಗಟ್ಟಲೆ ಹಣ ಬೇಕಾಗುತ್ತದೆ. ಏಕೆಂದರೆ ಜನಸಂಖ್ಯೆ ಹೆಚ್ಚುತ್ತಾ ಹೋದಂತೆ ನೀರಿನ ಸೌಕರ್ಯ, ಒಳಚರಂಡಿ ವ್ಯವಸ್ಥೆ ಇಲ್ಲದೆ, ಹೋದರೆ ನೀರು ರಸ್ತೆಯಲ್ಲಿ ಬಂದು ನಿಲ್ಲುವ ಪರಿಸ್ಥಿತಿ ಉಂಟಾಗುತ್ತದೆ. ಆಗ ನಿಮ್ಮ ಪರಿಸ್ಥಿತಿ ಏನಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು ಎಂದು ಹೇಳಿ ಇಷ್ಟು ಹೊತ್ತು ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಮತ್ತೊಮ್ಮೆ ಕೃತಜ್ಞತೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂತರ) : ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಎರಡು ಇಲಾಖೆಗಳ ಮೇಲೆ ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಮೊಟ್ಟಮೊದಲನೆಯದಾಗಿ ತಮಗೆ ನನ್ನ ವಂದನೆಗಳನ್ನರ್ಪಿಸುತ್ತೇನೆ. ನಗರಾಭಿವೃದ್ಧಿ ಇಲಾಖೆಯ ಬಗ್ಗೆ ಹೇಳುವುದಾದರೆ ನಾವು ಇವತ್ತು 50 ನೇ ಸ್ವಾತಂತ್ರ್ಯೋತ್ಸವವನ್ನು ಆಚರಣೆ ಮಾಡುತ್ತಿದ್ದೇವೆ. ಇದೇ ಆಗಸ್ಟ್ 15ಕ್ಕೆ ವಿಜೃಂಭಣೆಯಿಂದ ಆಚರಣೆ ಮಾಡಲಿಕ್ಕೆ ಎಲ್ಲಾ ಸಾಧಿಸಿದ್ದೇವೆ ಎಂಬುದರ ಬಗ್ಗೆ ಸ್ವಲ್ಪ ಆತ್ಮಾವಲೋಕನೆ ಮಾಡಿದರೆ ಬಹಳಷ್ಟು ವ್ಯಥೆ ಕೊಡುವಂತಹ ಸಂಗತಿಗಳನ್ನು ನಾವು ನೋಡಬಹುದು. ಇವತ್ತು ಒಬ್ಬ ಸಾಮಾನ್ಯ ನಾಗರಿಕ ಅವನು ಪಟ್ಟಣದಲ್ಲೇ ಇರಲಿ, ನಗರದಲ್ಲೇ ಇರಲಿ, ಅಥವಾ ಗ್ರಾಮದಲ್ಲೇ ಇರಲಿ, ಆತ ಬದುಕಲಿಕ್ಕೆ ಮೂಲಭೂತವಾದ ಏನು ಸೌಕರ್ಯ ಬೇಕೂ ಅದನ್ನೆಲ್ಲಾ ಕೊಡಲಿಕ್ಕೆ ಆಗಿದೆಯೋ ಅಥವ ಇಲ್ಲವೋ ಎನ್ನುವುದನ್ನು ನಾವು ಮತ್ತೆ ಮತ್ತೆ ವಿಚಾರ ಮಾಡಬೇಕು. ಇವತ್ತು ಪ್ರತಿಯೊಂದು ನಗರದಲ್ಲಿ ಪಟ್ಟಣದಲ್ಲಿ ವಾಸವಾಗಿರತಕ್ಕ ಜನಸಾಮಾನ್ಯನಿಗೆ ಮುಖ್ಯವಾಗಿ ಬೇಕಾದಂತಹ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿದ್ದೇವೋ ಅಥವಾ ಇಲ್ಲವೋ ಮತ್ತು ಈ 50 ವರ್ಷಗಳಲ್ಲಿ ಒಬ್ಬ ನಾಗರಿಕನಿಗೆ ತಲೆ ಮೇಲೆ ಸೂರು, ವಾಸ ಮಾಡಲಿಕ್ಕೆ ಮನೆ, ಜಾಗ ಕೊಟ್ಟಿದ್ದೇವೋ ಇಲ್ಲವೋ ಎಂಬುದನ್ನು ನಾವು ವಿಚಾರ ಮಾಡಬೇಕು.

1.00 ಪಿ.ಎಂ.

ಪ್ರತಿಯೊಂದು ನಗರ ಬೆಳಯಲಿಕ್ಕೆ ಎಲ್ಲಾ ರೀತಿಯಾದ ಅನುಕೂಲಗಳನ್ನು ನಾವು ಮಾಡಿಕೊಟ್ಟಿದ್ದೇವೋ ಹೇಗೋ ಎಂದು ವಿಚಾರ ಮಾಡಬೇಕಾಗುತ್ತದೆ. ನಗರ ಪ್ರದೇಶಗಳಲ್ಲಿರತಕ್ಕಂಥ ಎಷ್ಟು ಕೊಳಚೆ ಪ್ರದೇಶಗಳನ್ನು ನಾವು ಇಂದು ಸುಧಾರಣೆ ಮಾಡಿದ್ದೇವೆಯೇ ಎಂದು ಕೂಡ ನಾವು ಯೋಚನೆ ಮಾಡಬೇಕಾಗುತ್ತದೆ. ಹಾಗೆಯೇ ಎಷ್ಟು ಜನರಿಗೆ ಉದ್ಯೋಗಾವಕಾಶಗಳನ್ನು ಕೊಟ್ಟಿದ್ದೇವೆ ಎಂದು ನಾವು ಯೋಚನೆ ಮಾಡಬೇಕಾಗುತ್ತದೆ.ಅದರ ಜೊತೆಗೆ ಯೋಜನಾಬದ್ಧವಾಗಿ ನಾವು ನಗರಗಳನ್ನು ಬೆಳಸಿದ್ದೇವೋ ಹೇಗೋ ಎಂದು ಕೂಡ ಯೋಚನೆ ಮಾಡಬೇಕಾಗುತ್ತದೆ. ಅದನ್ನೆಲ್ಲಾ ನಾವು ಆತ್ಮಾವಲೋಕನೆ ಮಾಡಿ ನೋಡಿದರೆ ಫಲಿತಾಂಶ ಶೂನ್ಯ ಎಂದು ತಿಳಿದು ಬರುತ್ತದೆ. ಇವೊತ್ತು ನಾವು ಹಲವಾರು ಯೋಜನೆಗಳನ್ನು ಕೈಗೆತ್ತಿಕೊಳ್ಳುತ್ತೇವೆ ಸಾವಿರಾರು ಕೋಟಿ ರೂಪಾಯಿಗಳನ್ನು ಹಲವಾರು ಯೋಜನೆಗಳ ಸಲುವಾಗಿ ವಿನಿಯೋಗ ಮಾಡುತ್ತೇವೆ. ಆದರೆ ಆ ಸಾವಿರಾರು ಕೋಟಿ ರೂಪಾಯಿಗಳನ್ನು ಏನು ನಾವು ಖರ್ಚು ಮಾಡುತ್ತೇವೆ ನಿಜವಾಗಿಯೂ ಅದರ ಪ್ರತಿಫಲ ಜನಸಾಮಾನ್ಯರಿಗೆ ಮುಟ್ಟುವುದಿಲ್ಲ. ಆ ಯೋಜನೆ ನಿಷ್ಫಲ ಆಗುತ್ತದೆ. ನಿಜವಾಗಿ ನಾವು ಏನು ವಿಚಾರ ಮಾಡಿರುತ್ತೇವೆ ಆ ರೀತಿ ಆಗುವುದಿಲ್ಲ ಆ ಯೋಜನೆಗಳೆಲ್ಲಾ ವಿಫಲ ಆಗಿ ನಾವು ಮೊದಲು ಯಾವ ಸ್ಥಿತಿಯಲ್ಲಿದ್ದೆವೋ ಅದೇ ಸ್ಥಿತಿಯಲ್ಲಿದ್ದೇವೆ. ಇವೊತ್ತು ನಾವು ಕಾನೂನು ಕಟ್ಟಳೆಗಳನ್ನು ತೆಗೆದುಕೊಂಡು ನೋಡಿದರೆ, ಉದಾಹರಣೆಗೆ ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್ ತೆಗೆದುಕೊಂಡರೆ ಅದು 1976ನೇ ಇಸ್ವಿಯಲ್ಲಿ ಅನುಷ್ಠಾನಕ್ಕೆ ಬಂತು. ಅದು ಏತಕ್ಕೆ ಬಂತು ಎಂದರೆ ನಗರ ಪ್ರದೇಶಗಳಲ್ಲಿರತಕ್ಕಂಥ ಕಿಮ್ಮತ್ತಿನ ಜಾಗ ಕೇವಲ ಕೆಲವೇ ಪಟ್ಟಭದ್ರಹಿತಾಸಕ್ತಿಗಳ ಕೈವಶ ಆಗಬಾರದು ಮತ್ತು ಬಡವರಿಗೆ ಏನು ಜಾಗ ಉಳಿಯುತ್ತದೆ ಅದು ಸಾರ್ವಜನಿಕಗೊಳಿಸುವ ಸಲುವಾಗಿಯಾಗಲಿ ಅಥವಾ ಅಲ್ಲಿರತಕ್ಕಂಥ ಬಡವರಿಗೆ, ಸಾಮಾನ್ಯ ಜನರಿಗೆ ವಿತರಣೆ ಆಗುವ ಉದ್ದೇಶದಿಂದ ನಾವು ಅರ್ಬನ್ ಲ್ಯಾಂಡ್ ಸೀಲಿಂಗ್ ಅಂಡರ್ ರೆಗ್ಯೂಲೇಶನ್ ಆಕ್ಟ್‌ನ್ನು 1976ನೇ ಇಸ್ವಿಯಲ್ಲಿ ತೆಗೆದುಕೊಂಡು ಬಂದಿದ್ದು. ಆದರೆ ನಮ್ಮ ರಾಜ್ಯದಲ್ಲಿ ಆ ಕಾನೂನು ಪ್ರಕಾರ ನಾವು ಸರಿಯಾಗಿ ಅದನ್ನು ಅನುಷ್ಠಾನಗೊಳಿಸಿದ್ದೇವೆಯೋ ಹೇಗೋ? ಎಷ್ಟು ಜಮೀನನ್ನು ಎಷ್ಟು ಜಾಗವನ್ನು ನಾವು ಭೂ ಸ್ವಾಧೀನ ಪಡಿಸಿಕೊಂಡಿದ್ದೇವೆ, ಅದರಲ್ಲಿ ಎಷ್ಟು ಜಮೀನನ್ನು ಸಾರ್ವಜನಿಕರ ಸಲುವಾಗಿ ಉಪಯೋಗ ಮಾಡಿದ್ದೇವೆ? ಮತ್ತು ಎಷ್ಟು ಜಾಗವನ್ನು ನಾವು ವಿನಿಯೋಗ ಮಾಡಿದ್ದೇವೆ. ಇದನ್ನೆಲ್ಲಾ ನಾವು ಕೂಲಂಕಷವಾಗಿ ವಿಚಾರ ಮಾಡಿದರೆ ಇವೊತ್ತು ಆ ಒಂದು ಭೂ ಪರಿಮಿತಿ ಕಾನೂನನ್ನು ನಾವು ಸರಿಯಾಗಿ ಅನುಷ್ಠಾನಗೊಳಿಸಲಿಲ್ಲ, ಅದರ ಉದ್ದೇಶ ಸಫಲವಾಗಲಿಲ್ಲ ಎಂದು ನಾನು ಹೇಳಬಯಸುತ್ತೇನೆ. ಇದನ್ನೆಲ್ಲಾ ಸರ್ಕಾರದವರು ಕೊಟ್ಟಿರತಕ್ಕಂಥ ಅಂಕಿ ಅಂಶಗಳನ್ನು ನೋಡಿಕೊಂಡು ನಾನು ಹೇಳುತ್ತಿದ್ದೇನೆ. ಹೆಚ್ಚುವರಿ ಜಮೀನು ಇದ್ದವರು ಈ ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್ ಪ್ರಕಾರ ಡಿಸೆಂಬರ್ 1996ರವರೆಗೆ ಘೋಷಣಾ ಪತ್ರವನ್ನು ಕೊಡಬೇಕಾಗಿತ್ತು. ಅದರ ಪ್ರಕಾರ ಡಿಸೆಂಬರ್ 1996ರವರೆಗೆ ಒಟ್ಟು 33,070 ಘೋಷಣಾ ಪತ್ರಗಳು ಬಂದಿವೆ. ಅದರಲ್ಲಿ 18,493 ಘೋಷಣಾ ಪತ್ರಗಳ ಬಗ್ಗೆ ನಾವು ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಅಂದರೆ ಶೇಕಡಾ 50ರಷ್ಟು ಮಾತ್ರ ಡಿಸ್ಪೋಸ್ ಆಫ್ ಆಗಿದೆ. ಇನ್ನು ಶೇಕಡ 50 ರಷ್ಟು ನಮ್ಮ

ಜಿಲ್ಲಾಧಿಕಾರಿಗಳವರ ಕಛೇರಿಗಳಲ್ಲಿ ಚಾಲ್ತಿಯಲ್ಲಿ ಇವೆ. ಅಂದರೆ 1976ನೇ ಇಸ್ವಿಯಿಂದ 1997ನೇ ಇಸ್ವಿಯವರೆಗೆ ಈ 20 ವರ್ಷಗಳಲ್ಲಿ ನಾವು ಕೇವಲ ಶೇಕಡಾ 50 ರಷ್ಟು ಘೋಷಣಾ ಪತ್ರಗಳನ್ನು ನಿಕಾಲಿ ಮಾಡಿದ್ದೇವೆ. ಅದೇ ರೀತಿ ಇವೊತ್ತು ನಾವು ಎಷ್ಟು ಹೆಚ್ಚುವರಿ ಜಮೀನು ಎಂದು ನಿರ್ಧಾರ ಮಾಡಿದ್ದೇವೆ ಅದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. 2693.38 ಹೆಕ್ಟೇರ್ ಜಮೀನನ್ನು ಬಡವರ ಜಮೀನು ಎಂದು ಡಿಕ್ಲೇರ್ ಮಾಡಿದ್ದೇವೆ. ಮತ್ತು ಭೂ ಸ್ವಾಧೀನ ಆಗಿದ್ದು 1115.16 ಹೆಕ್ಟೇರ್ ಜಮೀನು. ಇದರಲ್ಲಿ ನಿಜವಾಗಿ ಉಪಯೋಗ ಆಗಿದ್ದು ಸರ್ಕಾರದ ಜಾಗ ಸಲುವಾಗಿಯಾಗಲೀ, ಸರ್ಕಾರದ ಬಿಲ್ಡಿಂಗ್ ಸಲುವಾಗಿಯಾಗಲೀ ನಿಕಾಲೆಯಾಗಿದ್ದು, ಕಬ್ಜಾ ತೆಗೆದುಕೊಂಡಿದ್ದೇವೆ. ಮತ್ತು ವಿನಾಯ್ತಿ ಕೊಟ್ಟಿದ್ದು 7449.94 ಹೆಕ್ಟೇರ್ ಜಮೀನು ಮಾತ್ರ. ಅಂದರೆ ಶೇಕಡಾ 75 ರಷ್ಟು ಜಮೀನಿಗೆ ನಾವು ವಿನಾಯ್ತಿ ಕೊಟ್ಟಿದ್ದೇವೆ. ಶೇಕಡಾ 25ರಷ್ಟು ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದೇವೆ. ಅದರಲ್ಲಿ ಕೇವಲ ಶೇಕಡಾ 10 ರಷ್ಟು ಜಮೀನು ಮಾತ್ರ ನಾವು ನಿಜವಾಗಿ ಕಬ್ಜಾ ತೆಗೆದುಕೊಂಡಿದ್ದೇವೆ. ಅಂದಮೇಲೆ ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್‌ನ್ನು ನಾವು ತರುವಾಗ ಅದರ ಮೂಲ ಉದ್ದೇಶ ಏನು ಇತ್ತು ಅದು ಸಫಲ ಆಗಲಿಲ್ಲ. ಅದರ ಬದಲು ಇವತ್ತು ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್ ಜಾರಿಗೆ ಬಂದಮೇಲೆ ಯಾವ ಪರಿಣಾಮ ಆಯಿತು ಎನ್ನುವುದನ್ನು ವಿಚಾರ ಮಾಡಬೇಕಾಗುತ್ತದೆ. ಇವೊತ್ತು ಸೈಟ್‌ಗಳ ಬೆಲೆ ಏರಿದ್ದು ಮತ್ತು ಅನಧಿಕೃತ ಕೊಳಚೆಪ್ರದೇಶಗಳು, ನಗರಪ್ರದೇಶಗಳು ಜಾಸ್ತಿಯಾಯಿತು. ರಿಸ್ಟ್ರಿಕ್ಷನ್ಸ್ ಜಾಸ್ತಿಯಾದಾಗ ಅನಧಿಕೃತ ನಿವೇಶನಗಳು, ಬಡಾವಣೆಗಳು ಅಲ್ಲಲ್ಲಿ ಪ್ರಾರಂಭ ವಾಗುತ್ತವೆ. ಇವತ್ತು ರಾಜ್ಯದಲ್ಲಿ ಯಾರು ಕಾನೂನು ಬದ್ಧವಾಗಿ ನಡೆಯುತ್ತಾರೆ ಅವರಿಗೆ ಪರಿಹಾರವಿಲ್ಲ. ನಾವು ಒಂದು ಉದಾಹರಣೆ ಕೊಡಬೇಕು ಎಂದರೆ ಯಾರಾದರೊಬ್ಬರು ಒಂದು ಸಣ್ಣ ಮನೆ ಕಟ್ಟಿಸುವ ಸಲುವಾಗಿ ಪ್ಲಾನ್ ತಯಾರು ಮಾಡಿ ಕಾರ್ಪೋರೇಶನ್‌ಗಾಗಲೀ, ಡೆವಲಪ್‌ಮೆಂಟ್ ಅಥಾರಿಟಿಗಾಗಲೀ ಪರವಾನಿಗೆ ಸಲುವಾಗಿ ಅರ್ಜಿಯನ್ನು ಕೊಟ್ಟು ಬಂದರೆ ಅವರು ಆ ಪರವಾನಿಗೆಗೋಸ್ಕರ ಆರು ತಿಂಗಳು ಅಥವಾ ಒಂದು ವರ್ಷ ಆ ಕಛೇರಿಗೆ ಅಡ್ಡಾಡಬೇಕಾಗುತ್ತದೆ. ನಂತರ ಅದರಲ್ಲಿ ಏನೇನೋ ಕರೆಕ್ಷನ್ ಮಾಡಿ ಪ್ಲಾನ್ ತಿದ್ದುಪಡಿ ಮಾಡಿ ಪರವಾನಿಗೆಯನ್ನು ನೀಡುತ್ತಾರೆ. ಅಷ್ಟಾದ ಮೇಲೂ ಆತ ಕಟ್ಟಡವನ್ನು ಕಟ್ಟಿಸುವಾಗ ಹಲವಾರು ತೊಂದರೆಗಳನ್ನು ಅಧಿಕಾರಿಗಳು ಮಾಡುತ್ತಾರೆ. ಆದರೆ ಅದರ ಬದಲು ಒಬ್ಬ ಪ್ರಬಾವಿ ನಾಗರೀಕ ಪರವಾನಿಗೆ ಸಲುವಾಗಿ ಅರ್ಜಿ ಕೊಡುವುದಿಲ್ಲ ಕಛೇರಿಗೆ ಹೋಗುವುದಿಲ್ಲ ಯಾರು ಸಂಬಂಧಪಟ್ಟವರಿರುತ್ತಾರೆ ಅವರ ಜೊತೆ ಶಾಮೀಲಾಗಿ ಮಾತುಕತೆ ಮಾಡಿಕೊಂಡು ಯಾವುದೇ ಪರವಾನಿಗೆ ಇಲ್ಲದೆ ಕಟ್ಟಡ ಕಟ್ಟುತ್ತಾನೆ. ಆತ ತಳಪಾಯ ಹಾಕುವಾಗ, ಆ ಕಟ್ಟಡ ಏರುವಾಗ ಸಂಬಂಧಪಟ್ಟ ಅಧಿಕಾರಿ ಕಟ್ಟಡದ ಕೆಲಸವನ್ನು ನಿಲ್ಲಿಸಿ ಸಂಪೂರ್ಣ ಕಟ್ಟಡವನ್ನು ಕೆಡವಲಿಕ್ಕೆ ನೋಟೀಸ್ ಕೊಡೂತ್ತಾನೆ. ಇದು ಅನಧಿಕೃತವಾದ ಕಟ್ಟದ ಇದನ್ನು ಡಿಮಾಲಿಶ್ ಮಾಡಿ ಎಂದು ನೋಟೀಸ್ ಕೊಡುತ್ತಾನೆ. ಆ ನಂತರ ಅವನು ಅರ್ಜಿ ಕೊಡುತ್ತಾನೆ. ಅವನು ಅರ್ಜಿ ಕೊಟ್ಟ ಮೇಲೆ ಸ್ವಲ್ಪ ಹಣ ಫೈನ್ ಹಾಕಿ ಅದನ್ನು ವಸೂಲಿ ಮಾಡಿ ಅದನ್ನು ರೆಗ್ಯುಲರೈಸ್ ಮಾಡುತ್ತರೆ. ಅಂದರೆ ಕಾನೂನು ಬದ್ಧವಾಗಿ ನಡೆಯುವಂಥ ನಾಗರೀಕರಿಗೆ ಯಾವುದೇ ರಕ್ಷಣೆ ಇಲ್ಲ. ಆದರೆ ಕಾನೂನು ವಿರುದ್ಧ ನಡೆಯುವಂಥ ಎಲ್ಲಾ ನಾಗರೀಕರಿಗೆ ಯಾವುದೇ ರೀತಿಯ ರಕ್ಷಣೆ ಇವೊತ್ತು ಸಿಗುತ್ತಿದೆ.

ಅದೇ ರೀತಿ ಇವೊತ್ತು ನಗರ ಪ್ರದೇಶಗಳಲ್ಲಿ ಕೊಳಚೆ ಪ್ರದೇಶಗಳು ಬರಲಿಕ್ಕೆ ಕಾರಣ ಏನು ಎಂದು ನಾವು ಮೂಲಭೂತವಾಗಿ ವಿಚಾರ ಮಾಡಬೇಕಾಗುತ್ತದೆ. ನಗರ ಪ್ರದೇಶಗಳಲ್ಲಿ ರೆವೆನ್ಯೂ ಲ್ಯಾಂಡ್ ಇರಲಿ ಅಥವಾ ಬೇರೆ ಪ್ರೈವೇಟ್ ಲ್ಯಾಂಡ್ ಓನರ್ಸ್‌ಗೆ ಸಂಬಂಧಪಟ್ಟ ಲ್ಯಾಂಡ್ ಇರಲಿ ಇಲ್ಲಿ ಕೆಲವು ಮಧ್ಯವರ್ತಿಗಳು ರಾಜಕೀಯವಾಗಿರಲಿ ಆರ್ಥಿಕವಾಗಿರಲಿ, ಸಾಮಾಜಿಕವಾಗಿರಲಿ ಇಂತಹ ಪ್ರಭಾವಿ ವ್ಯಕ್ತಿಗಳು ಮಧ್ಯವರ್ತಿಗಳಾಗಿ ಕೆಲಸ ಮಾಡಿ ಅಲ್ಲಿಯ ಅಧಿಕಾರಗಳನ್ನು ಒಳಗೆ ಮಾಡಿಕೊಂಡು ಅವರು ಇವೊತ್ತು ಯಾವುದೇ ಒಂದು ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್ ಪ್ರಕಾರ ಡಿಕ್ಲರೇಶನ್ ಕೊಡುವುದಿಲ್ಲ. ವಿನಾಯ್ತಿ ಸಲುವಾಗಿ ಅರ್ಜಿ ಕೊಡುವುದಿಲ್ಲ. ಮತ್ತು ಕಾರ್ಪೊರೇಶನ್‌ಗೆ ಡೆವಲಪ್‌ಮೆಂಟ್ ಅಥಾರಿಟಿಗೆ ಹೋಗಿ ಲೇಔಟ್ ಅಪ್ರೂವಲ್ ತೆಗೆದುಕೊಳ್ಳುವುದಿಲ್ಲ. ಆದರೆ ಸ್ವತಃ ಪ್ಲಾ ನ್ ಮಾಡುತ್ತಾರೆ ಮತ್ತು ಅಲ್ಲಿ ಮಾರ್ಕ್‌ಮಾಡುತ್ತರೆ. ಹದಿನೈದು ಇಪ್ಪತ್ತು ಅಡಿ, ಮೂವತ್ತು ಇಪ್ಪತ್ತು ಅಡಿ-ಆ ರೀತಿ ಸೈಟ್ ಮಾಡಿ ನಾಗರೀಕರಿಗೆ ಬಡ ಜನರಿಗೆ ಇಪ್ಪತ್ತು ರೂಪಾಯಿ ಸ್ಟ್ಯಾಂಪ್ ಪೇಪರ್ ಮೇಲೆ ಖರೀದಿ ಕಾಗದ ಮಾಡಿ ಕೊಡುತ್ತಾರೆ. ಆ ಖರೀದಿ ಕಾಗದದ ಆಧಾರದ ಮೇಲೆ ಅಲ್ಲಿ ಸಾಮಾನ್ಯ ಜನ ಅನಧಿಕೃತ ಮನೆಗಳನ್ನು ಕಟ್ಟಿಸುತ್ತಾರೆ. ಆ ಅನಧಿಕೃತವಾಗಿರುವ ಲೇಔಟ್‌ನ್ನು ಅಭಿವೃದ್ಧಿ ಮಾಡುವುದಿಲ್ಲ. ಅಲ್ಲಿ ರಸ್ತೆ ಇರುವುದಿಲ್ಲ, ವಿದ್ಯುಚ್ಛಕ್ತಿ ಇರುವುದಿಲ್ಲ. ಆದರೆ ಬಡ ಜನತೆಯಿಂದ, ಸಾಮಾನ್ಯ ಜನತೆಯಿಂದ ಆತ ಹಣವನ್ನು ಕಿತ್ತುಕೊಂಡು ಪರಾರಿಯಾಗುತ್ತಾನೆ. ನಂತರ ಆ ಅನಧಿಕೃತ ಮನೆಗಳು ಗುಡಿಸಲುಗಳಾಗುತ್ತವೆ. ಮುಂದೆ ತೊಂದರೆ ಅನುಭವಿಸುವವರು ಆ ಸಾಮಾನ್ಯ ಜನತೆ. ಆದರೆ ಅನಧಿಕೃತ ಕೊಳಚೆ ಪ್ರದೇಶಗಳು ಬರುವ ಸಮಯದಲ್ಲಿಯೇ 10 ರೂಪಾಯಿ ಅಥವಾ 20 ರೂಪಾಯಿ ಸ್ಟಾಂಪ್ ಪೇಪರ್‌ನಲ್ಲಿ ಯಾವ ಖರೀದಿ ಕಾಗದ ಪತ್ರಗಳನ್ನು ಮಧ್ಯವರ್ತಿಗಳು ಮಾಡಿಕೊಡುತ್ತಾರೆ ಆಗ ಈ ವಿಚಾರ ಅಧಿಕಾರಿಗೆ ಗೊತ್ತಿದ್ದರೂ ಕೂಡ ಇಂಥ ಮಧ್ಯವರ್ತಿಗಳ ಮೇಲೆ ಯಾವುದೇ ಕ್ರಮವನ್ನು ಕೈಗೊಳ್ಳುವುದಿಲ್ಲ. ಇಂಥವರಿಗೆ ಯಾವುದೇ ರೀತಿಯ ನೋಟೀಸ್ ಕೊಡುವುದಿಲ್ಲ, ಅವರ ಮೇಲೆ ಕಾನೂನು ಕ್ರಮವನ್ನು ತೆಗೆದುಕೊಳ್ಳುವುದಿಲ್ಲ. ಆದರೆ ಎಲ್ಲಾ ಗುಡಿಸಲುಗಳು, ಮನೆಗಳು ಅಲ್ಲಿ ಎದ್ದಮೇಲೆ ಆಗ ಕಾಟಾಚಾರಕ್ಕೆ ಒಂದು ನೋಟೀಸ್ ಕೊಟ್ಟು ಬಿಡುತ್ತಾರೆ. ಇವೊತ್ತು ಈ ರೀತಿಯ ಒಂದು ವ್ಯವಸ್ಥೆ ಹೆಚ್ಚಾಗಿದೆ. ಇದನ್ನು ಬದಲಾವಣೆ ಮಾಡುವುದಕ್ಕೆ ಸರ್ಕಾರದವರು ಏನಾದರೂ ಪ್ರಯತ್ನ ಮಾಡುತ್ತಾರೆಯೇ ಎಂಬ ಬಗ್ಗೆ ನಾವು ವಿಚಾರ ಮಾಡಬೇಕಾಗುತ್ತದೆ. ಈ ಕೊಳಚೆ ಪ್ರದೇಶ ಮತ್ತು ಅನಧಿಕೃತ ಕಟ್ಟಡಗಳನ್ನು ರೆಗ್ಯುಲರೈಸ್ ಮಾಡಬೇಕೆಂದು ನಾವುಗಳೆಲ್ಲಾ ಮಾತನಾಡಿಕೊಳ್ಳುತ್ತೇವೆ. ಅವುಗಳನ್ನು ಎಲ್ಲಾರೂ ಒಪ್ಪಿಕೊಳ್ಳುತ್ತೇವೆ. ಆದರೆ ಇಲ್ಲಿಯವರೆವಿಗೂ ಏನು ಕೊಳಚೆ ಪ್ರದೇಶಗಳಾಗಿವೆ ಅವುಗಳನ್ನು ಸುಧಾರಣೆ ಮಾಡೋಣ, ಅವರಿಗೆ ಒಳ್ಳೆಯ ಮನೆಗಳನ್ನು ಕಟ್ಟಿಸಿಕೊಡೋಣ, ಅವರಿಗೆ ಒಳ್ಳೆಯ ಸೌಕರ್ಯಗಳನ್ನು ಮಾಡಿಕೊಡೋಣ. ಆದರೆ ಇನ್ನು ಮುಂದೆ ಕೊಳಚೆ ಪ್ರದೇಶಗಳು ಬರದಂತೆ ಮಾಡಲು ಸರ್ಕಾರ ಏನು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡಿದೆ ಅದರ ಬಗ್ಗೆ ನಾವು ಇಲ್ಲಿ ವಿಚಾರ ಮಾಡಬೇಕಾಗುತ್ತದೆ. ಈಗಿರುವ ಕೊಳಚೆ ಪ್ರದೇಶಗಳ ಸಂಧಾರಣೆ ಮಾಡಬೇಕು. ಇದುವರೆವಿಗೂ ಯಾರು ಮಧ್ಯವರ್ತಿಗಳು ಇಂಥ ಕೊಳಚೆ ಪ್ರದೇಶಗಳ ನಿರ್ಮಾಣದಿಂದ ಕೋಟ್ಯಾಧಿಪತಿಗಳಾಗಿದ್ದಾರೆ ಅಂಥವರನ್ನು ಕಡಿವಾಣ ಹಾಕುವುದಕ್ಕೆ ಸರ್ಕಾರ ಉಗ್ರವಾದ ಕ್ರಮಗಳನ್ನು

ತೆಗೆದುಕೊಳ್ಳಬೇಕಾಗುತ್ತದೆ. ಈ ರೀತಿ ಮಾಡದಿದ್ದರೆ ಎಲ್ಲಾ ನಗರ ಪ್ರದೇಶಗಳಲ್ಲಿ, ಪಟ್ಟಣ ಪ್ರದೇಶಗಳಲ್ಲಿ ಇಂಥ ಮಧ್ಯವರ್ತಿಗಳಿಂದ ಹೆಚ್ಚಿನ ರೀತಿಯಲ್ಲಿ ಕೊಳಚೆ ಪ್ರದೇಶಗಳು ನಿರ್ಮಾಣವಾಗುವುದಕ್ಕೆ ಕಾರಣವಾಗುತ್ತಾರೆ. ಆದುದರಿಂದ ಇದನ್ನು ತಡೆಯಬೇಕಾದರೆ ಕಟ್ಟುನಿಟ್ಟಿನ ಕ್ರಮವನ್ನು ಸರ್ಕಾರ ಕೈಗೊಳ್ಳಬೇಕು, ಇದಕ್ಕಾಗಿ ಅಲ್ಟರ್‌ನೆಟಿವ್ ಮೆಶರ್ಸ್ ಕೈಗೊಳ್ಳ ಬೇಕಾಗುತ್ತದೆ. ಇದನ್ನು ಮಾಡದೇ ಕೇವಲ ಕೊಳಚೆ ಪ್ರದೇಶಗಳು ಆಗಬಾರದು, ಅಲ್ಲಿರುವವರಿಗೆ ಕಾನೂನುಬದ್ಧವಾಗಿ ಏನು ನಡೆಯಬೇಕೋ ಅವೆಲ್ಲವೂ ನಡೆಯಬೇಕು ಎಂದು ಹೇಳಿದರೆ ಅದು ನಡೆಯುವುದಿಲ್ಲ. ಇವೊತ್ತು ಬಡ ಜನತೆಗೆ ಸರಿಯಾಗಿ ನಿವೇಶನವನ್ನು ಅತ್ಯಂತ ಕಡಿಮೆ ದರದಲ್ಲಿ ನೀಡಿದರೆ ಕೊಳೆಚೆ ಪ್ರದೇಶಗಳು ಬೆಳವಣಿಗೆಯಾಗುವುದನ್ನು ತಡೆಯುವುದಕ್ಕೆ ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ನಾವು ಸರಿಯಾದ ಯೋಜನೆಗಳನ್ನು ಸರಿಯಾದ ದಿಕ್ಕಿನಲ್ಲಿ ಹಾಕಿಕೊಂಡು ಆ ಪ್ರಕಾರ ನಡೆಯದೇ ಹೋದರೆ ಈ ರೀತಿಯ ಸಮಸ್ಯೆಗಳು ಉದ್ಭವವಾಗುವುದಕ್ಕೆ ಕಾರಣವಾಗುತ್ತದೆ. ಆ ದಿಸೆಯಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಇವುತ್ತು ಹಲವಾರು ನಗರಗಳಲ್ಲಿ ಡೆವಲಪ್‌ಮೆಂಟ್ ಅಥಾರಿಟೀಸ್ ಇವೆ, ಬೆಂಗಳೂರಿನಲ್ಲಿ ಬಿ.ಡಿ.ಎ., ಹುಬ್ಬಳ್ಳಿಯಲ್ಲಿ ನಗರಾಭಿವೃದ್ಧಿ ಪ್ರಾಧಿಕಾರ, ಮಂಗಳೂರಿನಲ್ಲಿ ಮತ್ತು ಬೆಳಗಾಂನಲ್ಲಿ ನಗರಾಭಿವೃದ್ಧಿ ಪ್ರಾಧಿಕಾರ, ಮಂಗಳೂರಿನಲ್ಲಿ ಮತ್ತು ಬೆಳಗಾಂನಲ್ಲಿ ನಗರಾಭಿವೃದ್ಧಿ ಪ್ರಾಧಿಕಾರಗಳು ಇವೆ. ಈ ರೀತಿಯಲ್ಲಿ ರಾಜ್ಯದ ಹಲವಾರು ನಗರಗಳಲ್ಲಿ ನಗರಾಭಿವೃದ್ಧಿ ಪ್ರಾಧಿಕಾರಗಳು ಇವೆ. ಆದರೆ ಅವುಗಳು ಯಾವ ರೀತಿಯಾಗಿ ಕೆಲಸಗಳನ್ನು ಮಾಡುತ್ತಿವೆ ಎಂಬುದನ್ನು ನಾವು ವಿಚಾರ ಮಾಡಿ ನೋಡಿದರೆ ಬಹುಶಃ ಯಾವ ಉದ್ದೇಶಕ್ಕಾಗಿ ನಾವು ಪ್ರಾಧಿಕಾರವನ್ನು ಮಾಡಿದ್ದೇವೋ ಆ ಉದ್ದೇಶ ಸಫಲವಾಗುತ್ತಿಲ್ಲ. ಇವೊತ್ತು ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರವನ್ನೇ ತೆಗೆದುಕೊಳ್ಳಿ ಅಥವಾ ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಕಾರವನ್ನೇ ತೆಗೆದುಕೊಳ್ಳಿ ಕಳೆದ 5 ವರ್ಷಗಳಲ್ಲಿ ಎಷ್ಟು ನಿವೇಶನಗಳನ್ನು ಹಂಚಿದ್ದಾರೆ ಎಂಬುದನ್ನು ನಾವು ವಿಚಾರ ಮಾಡಬೇಕಾಗುತ್ತದೆ. ಇವೆರಡೂ ಪ್ರಾಧಿಕಾರಗಳ ನಿವೇಶನಗಳ ಹಂಚಿಕೆಯ ಫಲಿತಾಂಶವನ್ನು ನೋಡಿದರೆ ಫಲಿತಾಂಶ ಶೂನ್ಯವಾಗಿ ಇದೆ. ಏಕೆ ಹೀಗೆ ಆಗುತ್ತಿದೆ? ಈ ಅಭಿವೃದ್ಧಿ ಪ್ರಾಧಿಕಾರಗಳು ಕೇವಲ ನೋಟಿಫಿಕೇಶನ್ ಮತ್ತು ಡೀ-ನೋಟಿಫಿಕೇಶನ್ ಮಾಡುವ ಕೆಲಸವನ್ನೇ ಮಾಡುತ್ತಿವೆ. ಇವರಿಗೆ ಇರುವುದು ಇದೇ ಕೆಲಸ ಮಾತ್ರವೇ ಎಂಬುದನ್ನು ನಾವು ವಿಚಾರ ಮಾಡಬೇಕಾಗುತ್ತದೆ. ಏಕೆಂದರೆ ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ಒಬ್ಬ ಸದಸ್ಯನಾಗಿ ನಾನು ಹೇಳುತ್ತಿದ್ದೇನೆ, ಅಲ್ಲಿ ಪ್ರತಿ ತಿಂಗಳು ಬರುವ ಅಜೆಂಡಾದಲ್ಲಿ ಸಬ್ಜೆಕ್ಟ್ ನೋಡಿದರೆ ಸುಮಾರು 25 ಪರ್ಸೆಂಟ್ ವಿಷಯ ಡೀ-ನೋಟಿಫೈ ಸಲುವಾಗಿಯೇ ಅರ್ಜಿಗಳು ಇರುತ್ತವೆ ಎಂಬುದನ್ನು ತಿಳಿಸಿರುತ್ತಾರೆ. ನಾವು ಪ್ರಾಧಿಕಾರದಲ್ಲಿ ಸದಸ್ಯರಾಗಿ ಕೇವಲ ಡೀ-ನೋಟಿಫೈ ಸಲುವಾಗಿ ಕೆಲಸ ಮಾಡುವುದೇ ನಮ್ಮ ಕೆಲಸವೇ ಎಂಬುದನ್ನು ನಾನು ವಿಚಾರ ಮಾಡಿದ್ದೇನೆ. ನಾವು ಇಂದು ಏಕೆ ಸಾವಿರಾರು ನಿವೇಶನಗಳನ್ನು ಮಾಡುವುದಕ್ಕೆ ಆಗುತ್ತಿಲ್ಲ? ಇಂಥ ನಿವೇಶನಗಳಲ್ಲಿ 30x20 ಅಥವಾ 30x40 ನಿವೇಶನಗಳನ್ನು ನಗರಗಳಲ್ಲಿ ಹತ್ತಾರು ಸಾವಿರ ಮಾಡಿದ್ದೇ ಆದರೆ ಬಹುಶಃ ನಗರಗಳಲ್ಲಿ ವಸತಿ ಸಮಸ್ಯೆ ನಿವಾರಣೆಯಾಗುವುದಕ್ಕೆ ಸಾಧ್ಯವಾಗುತ್ತದೆ. ಆದರೆ ಆ ದಿಸೆಯಲ್ಲಿ ಗಂಭೀರವಾದ ಪ್ರಯತ್ನ ಸರ್ಕಾರದ ಕಡೆಯಿಂದ ಆಗುತ್ತಿಲ್ಲ. ಆ ನಿಟ್ಟಿನಲ್ಲಿ ಇವೊತ್ತು

ನಗರಾಭಿವೃದ್ಧಿ ಪ್ರಾಧಿಕಾರಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಡಬೇಕಾಗುತ್ತದೆ. ಏಕೆಂದರೆ, ನಿವೇಶನಗಳನ್ನು ಮಾಡುವುದಕ್ಕಾಗಿ ಹಲವಾರು ನೋಟಿಫೈಡ್ ಮಾಡಿಬಿಟ್ಟಿದ್ದೇವೆ, ನಿವೇಶನಗಳನ್ನು ಮಾಡುವುದಕ್ಕಾಗಿಯೇ ನೂರಾರು ಎಕರೆ ಜಾಗವನ್ನು ನಾವು ಅಕ್ವೈರು ಮಾಡುವ ಸಲುವಾಗಿ ಇಟ್ಟಿದ್ದೇವೆ. ಈ ಫೈಲ್‌ಗಳು ಸರ್ಕಾರದ ಹತ್ತಿರ ಬರುತ್ತವೆ. ಆದರೆ ಸರ್ಕಾರದಿಂದ ಈ ಫೈಲ್‌ಗಳ ಬಗ್ಗೆ ಬೇಗನೇ ಇತ್ಯರ್ಥವಾಗುವುದಿಲ್ಲ, ಬೇಗನೇ ನಿಖಾಲಿಯಾಗುವುದಿಲ್ಲ, ಈ ರೀತಿಯಾಗಿ ಭೂಮಿಯನ್ನು ಅಕ್ವೈರು ಮಾಡುವ ಕೆಲಸದ ಪೈಲುಗಳ ಬಗ್ಗೆ ಸರ್ಕಾರದಿಂದ ಬೇಗನೇ ಮೂವ್‌ಮೆಂಟ್ ಆಗುವುದಿಲ್ಲವಾದ ಕಾರಣ ನಾವು ಭೂ ಮಾಲೀಕರುಗಳಿಗೆ ಮುಖ ತೋರಿಸುವುದಕ್ಕೆ ಕೂಡ ಇಂದು ಆಗುತ್ತಿಲ್ಲ. ಇದರಿಂದಾಗಿ ನಾವು ಬಡ ಜನರಿಗೆ ಡೆವಲಪ್‌ಮೆಂಟ್ ಅಥಾರಿಟಿಯಿಂದ ಒಂದು ನಿವೇಶನ ಕೊಡಿಸುವ ಕೆಲಸವೂ ಕೂಡ ಆಗುತ್ತಿಲ್ಲ. ಇದಕ್ಕಾಗಿ ಸರ್ಕಾರ ಹೆಚ್ಚಿನ ರೀತಿಯಲ್ಲಿ ಗಮನ ಕೊಟ್ಟು ಈ ಕೆಲಸವನ್ನು ಮಾಡಬೇಕಾಗುತ್ತದೆ. ಇವೊತ್ತು ನಗರಾಭಿವೃದ್ಧಿ ಪ್ರಾಧಿಕಾರಗಳು ನಿವೇಶನಗಳನ್ನು ಮಾಡುವುದಕ್ಕೆ ಸಂಬಂಧಪಟ್ಟಂತೆ ಹೆಚ್ಚಿನ ಅಧಿಕಾರವನ್ನು ಕೊಡುವುದಕ್ಕೆ ಸಂಬಂಧಪಟ್ಟಂತೆ ಸರ್ಕಾರ ವಿಚಾರ ಮಾಡಬೇಕಾಗುತ್ತದೆ. ಆ ದಿಕ್ಕಿನಲ್ಲಿ ಕೆಲಸ ಮಾಡದಿದ್ದರೆ ಈಗ ಏನು ಬಿ.ಡಿ.ಎ. ಇದೆ ಅಥವಾ ಬೇರೆ ನಗರಗಳಲ್ಲಿ ನಗರಾಭಿವೃದ್ಧಿ ಪ್ರಾಧಿಕಾರಗಳು ಇವೆ ಅವು ಬಿಳಿ ಆನೆ ಇದ್ದ ಹಾಗೆ ಆಗುತ್ತದೆ, ಬಿಳಿ ಆನೆಯನ್ನು ಸಾಕಿದ ಹಾಗೆ ಆಗುತ್ತದೆ, ಇಂಥ ಬಿಳಿ ಆನೆಗಳನ್ನು ಸರ್ಕಾರ ಸಾಕುವಂಥ ಪ್ರಸಂಗ ಬರುತ್ತದೆ. ಏಕೆಂದರೆ ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ನೋಟಿಫಿಕೇಶನ್ ಮತ್ತು ಡೀ-ನೋಟಿಫೈ ಮಾಡುವ ಕೆಲಸದ ಬಗ್ಗೆ ಮಾತ್ರ ವಿಚಾರವಾಗುತ್ತಿದೆ ಮತ್ತು ಚರ್ಚೆಯಾಗುತ್ತಿದೆಯೇ ಹೊರತು ಈ ಬಿಳಿ ಆನೆ, ನಿವೇಶನ ಕೊಡುವ ಕೆಲಸದ ಸಾಧನೆ ಮಾತ್ರ ಕೇವಲ ಶೂನ್ಯವಾಗಿದೆ ಎಂಬುದನ್ನು ನಾನು ಈ ಸದನದಲ್ಲಿ ಹೇಳಬಯಸುತ್ತೇನೆ. ಇನ್ನೊಂದು ಬಹು ಮುಖ್ಯವಾದ ವಿಷಯವನ್ನು ಇಂದು ಪ್ರಸ್ತಾಪ ಮಾಡಬೇಕಾಗುತ್ತದೆ. ಅಕ್ಟ್ರಾಯ್ ರದ್ದು ಮಾಡಿದ್ದರಿಂದ ಸ್ಥಳೀಯ ಸಂಸ್ಥೆಗಳ, ಮಹಾ ನಗರಸಭೆ, ನಗರ ಸಭೆಗಳ ಉತ್ಪನ್ನ ಬಹಳ ಕಡಿಮೆಯಾಗಿದೆ. ಈ ರೀತಿಯಲ್ಲಿ ಉತ್ಪನ್ನ ಕಡಿಮೆಯಾದ್ದರಿಂದ ಅಲ್ಲಿ ಯಾವುದೇ ರೀತಿಯಾದ ಹೆಚ್ಚಿನ ಅಭಿವೃದ್ಧಿ ಕೆಲಸಗಳಾಗುವುದನ್ನು ನಾವು ಕಾಣುತ್ತಿಲ್ಲ. ಇವೊತ್ತು ನಾವು ಯಾವುದೇ ನಗರಸಭೆಯ ಅಧಿಕಾರಿಗಳನ್ನು ಕಂಡು ರಸ್ತೆಗಳನ್ನು ಮಾಡಿಕೊಡಿ, ಇನ್ನಿತರ ಅಭಿವೃದ್ಧಿ ಕಾರ್ಯಗಳನ್ನು ಮಾಡಿಕೊಡಿ ಎಂದು ಕೇಳಿದರೆ ನಾವೇನು ಮಾಡುವುದು, ನಮ್ಮಲ್ಲಿ ಫಂಡ್ಸ್ ಇಲ್ಲ, ಫಂಡ್ಸ್ ಇಲ್ಲದಿರುವುದರಿಂದ ನಾವು ಏನೂ ಅಭಿವೃದ್ಧಿ ಕೆಲಸಗಳನ್ನು ಮಾಡುವುದಕ್ಕೆ ಆಗುತ್ತಿಲ್ಲವೆಂದು ಹೇಳುತ್ತಾರೆ. ಈ ರೀತಿಯಾಗಿ ನಗರಪ್ರದೇಶಗಳಲ್ಲಿರುವ ನಾಗರೀಕರಿಗೆ ಮೊಟ್ಟಮೊದಲನೆಯದಾಗಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಸರಿಯಾದ ರೀತಿಯಲ್ಲಿ ಮಾಡುವುದಕ್ಕೆ ಆಗಿಲ್ಲ, ಸರಿಯಾದ ಸಂಪರ್ಕ ರಸ್ತೆಯನ್ನು ಮಾಡಿಕೊಡುವುದಕ್ಕೆ ಆಗುತ್ತಿಲ್ಲವೆಂದ ಮೇಲೆ ಇದರಷ್ಟು ನಾಚಿಕೆಗೇಡಿನ ವಿಷಯ ಮತ್ತೊಂದಿಲ್ಲವೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ನಾವು ಅಕ್ಟ್ರಾಯ್ ರದ್ದು ಮಾಡಿದ್ದೇವೆ. ಇವೊತ್ತು ಅಕ್ಟ್ರಾಯ್ ಬೇಕು ಎಂದಾಗ ಅದಕ್ಕೆ ವಿರುದ್ಧರಾಗಿ ಪ್ರತಿಭಟಿಸಲು ಬೇರೊಂದು ವರ್ಗ ಇದೆ. ಅದನ್ನು ನಾವು ಕಾಂಟ್ರವರ್ಷಿಯಲ್ ಆಗಿ ಮಾಡುವುದು ಬೇಡ. ಹಿಂದೆ ಅಕ್ಟ್ರಾಯ್ ಇದ್ದಾಗ ಮಹಾನಗರಪಾಲಿಕೆಗಳಿಗೆ ಮತ್ತು ನಗರಸಭೆಗಳಿಗೆ ಯಾವ ರೀತಿಯ ಉತ್ಪನ್ನ ಇತ್ತೋ ಅದು ಕಡಿಮೆಯಾಗ ಮೇಲೆ ಅದೇ ಪ್ರಮಾಣದಲ್ಲಿ ಆ ಉತ್ಪನ್ನವನ್ನು

ಹೆಚ್ಚು ಮಾಡುವುದರ ಬದಲಾಗಿ ಯಾವ ರೀತಿಯಲ್ಲಿ ನಾವು ಪ್ರವಿಶನ್ ಮಾಡಿದ್ದೇವೆ ಎಂಬ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಅಕ್ಟ್ರಾಯ್ ರದ್ದು ಮಾಡಿದ ಮೇಲೆ ಮಹಾನಗರಪಾಲಿಕೆಗಳಿಗೆ ಉತ್ಪನ್ನ ಕೊಡುವ ಸಲುವಾಗಿ ಪ್ರವೇಶ ತೆರಿಗೆಯನ್ನು ಇಂಟ್ರಡ್ಯೂಸ್ ಮಾಡಿದರು. ಆದರೆ ಅಕ್ಟ್ರಾಯ್ ನಿಂದ ಏನು ಆದಾಯ ಬರುತ್ತಿತ್ತು ಅದರ ಬದಲಾಗಿ ಬೇರೆ ವ್ಯವಸ್ಥೆ ಮಾಡಿದಾಗ ಅದೇ ಪ್ರಮಾಣದಲ್ಲಿ ಉತ್ಪನ್ನ ಬರಬೇಕೇ ಹೊರತು ಕಡಿಮೆಯಾಗಬಾರದು. ಅಕ್ಟ್ರಾಯ್ ರದ್ದು ಮಾಡಿದ ಮೇಲೆ ಉತ್ಪನ್ನ ಕಡಿಮೆಯಾಯಿತು. ರಾಜ್ಯ ಸರ್ಕಾರ ಪ್ರವೇಶ ತೆರಿಗೆಯಿಂದ ಮಹಾ ನಗರಪಾಲಿಕೆಗಳಿಗೆ ಕೊಡುವ ಉತ್ಪನ್ನ ಕಡಿಮೆಯಾಯಿತು. ಇದಕ್ಕಾಗಿ ಪರಿಹಾರ ಧನವನ್ನು ಏನು ಕೊಡುತ್ತಿದ್ದರು ಅದನ್ನೂ ಕೂಡ ಒಮ್ಮೆಗೇ ಕೊಡದೆ ಮೂರು ತಿಂಗಳಿಗೊಮ್ಮೆ, ಆರು ತಿಂಗಳಿಗೊಮ್ಮೆ ಕೊಡುತ್ತಿರುವುದರಿಂದ ಯಾವುದೇ ಪ್ರಯೋಜನ ಕೂಡ ಆಗುವುದಿಲ್ಲ. ಅಕ್ಟ್ರಾಯ್ ಇದ್ದಾಗ ಯಾವ ಅಭಿವೃದ್ಧಿ ಕೆಲಸಗಳು ನೆಡೆಯುತ್ತಿದ್ದವೋ ಅವುಗಳು ಅಕ್ಟ್ರಾಯ್ ರದ್ದಾದ ಮೇಲೆ ನಿಂತುಹೋದವು. ಜನರು ಮೂಲಭೂತ ಸೌಕರ್ಯಗಳನ್ನು ಕೇಳುತ್ತಿದ್ದರು, ಆದರೆ ಅಧಿಕಾರಿಗಳು ಅದನ್ನು ಕೊಡುತ್ತಿರಲಿಲ್ಲವಾದ ಕಾರಣ ಈ ಬಗ್ಗೆ ಜನ ಪ್ರತಿನಿಧಿಗಳು ಜನರಿಗೆ ಯಾವುದೇ ರೀತಿಯ ಉತ್ತರ ಹೇಳುವುದಕ್ಕೂ ಕೂಡ ಅವಕಾಶವಿರಲಿಲ್ಲ. ಈ ರೀತಿಯಿಂದಾಗಿ ಮೂಲ ಭೂತ ಸೌಕರ್ಯಗಳಿಗಾಗಿ ಮಹಾನಗರಗಳಲ್ಲಿ ಜನತೆ ಪರದಾಡುವಂಥ ಪರಿಸ್ಥಿತಿ ಬಂದಿದೆ. ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿ ಹಿಂದೆ ಅಕ್ಟ್ರಾಯ್‌ನಿಂದ ಏನು ಆದಾಯ ಬರುತ್ತಿತ್ತು ಅದಕ್ಕೆ ಬದಲಿ ವ್ಯವಸ್ಥೆಯಿಂದ ಯಾವ ರೀತಿಯಾಗಿ ಉತ್ಪನ್ನವನ್ನು ಹೆಚ್ಚು ಮಾಡುವುದಕ್ಕೆ ಕ್ರಮ ಕೈಗೊಂಡಿದೆ ಅದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಆದುದರಿಂದ ಸರ್ಕಾರ ಮತ್ತು ಮಾನ್ಯ ಮಂತ್ರಿಗಳು ಇದರ ಬಗ್ಗೆ ಗಂಭೀರವಾಗಿ ವಿಚಾರ ಮಾಡಬೇಕೆಂದು ತಮ್ಮ ಮೂಲಕ ಹೇಳಬಯಸುತ್ತೇನೆ. ಅದೇ ರೀತಿ ಇಂದು ಮಹಾ ನಗರಪ್ರದೇಶಗಳಲ್ಲಿ ಡೆವಲಪ್‌ಮೆಂಟ್ ಅಥಾರಿಟಿ ಇದೆ, ಅದೇ ರೀತಿ ಮಹಾನಗರಸಭೆ ಇದೆ, ಒಳಚರಂಡಿ ಬೋರ್ಡ್ ಇದೆ ಹಾಗೂ ಗೃಹ ಮಂಡಳಿ ಇದೆ. ಆದರೆ ಇವತ್ತು ಯಾವುದೇ ಒಬ್ಬ ಮನುಷ್ಯ ಬಿಲ್ಡಿಂಗ್ ಕಟ್ಟುವ ಸಲುವಾಗಿ ಪರ್ಮಿಶನ್‌ಗಾಗಿ ಅಥವಾ ಯಾವುದೇ ವಸತಿ ಸಮಸ್ಯೆ ಸಲುವಾಗಿ ಹೋಗಬೇಕಾದರೆ ಮಹಾನಗರಸಭೆಗೂ ಆತ ಅಪ್ರೋಚ್ ಮಾಡಬೇಕಾಗುತ್ತದೆ, ಡೆವಲಪ್‌ಮೆಂಟ್ ಅಥಾರಿಟಿಗೂ ಅಪ್ರೋಚ್ ಮಾಡಬೇಕಾಗುತ್ತದೆ ಮತ್ತು ಗೃಹ ಮಂಡಳಿಗೂ ಅಪ್ರೋಚ್ ಮಾಡಬೇಕಾಗುತ್ತದೆ. ಆದುದರಿಂದ ಏಕಗವಾಕ್ಷಿ ಸಿಸ್ಟಂನ್ನು ಜಾರಿಗೆ ತಂದರೆ ಅದು ನಾಗರಿಕರಿಗೂ ಅನುಕೂಲವಾಗುತ್ತದೆ ಮತ್ತು ನಗರಪ್ರದೇಶಗಳ ಅಭಿವೃದ್ಧಿಗೂ ಅನುಕೂಲವಾಗುತ್ತದೆ. ಇವತ್ತು ಯಾವುದೇ ಅಭಿವೃದ್ಧಿ ಬಗ್ಗೆ ಪ್ರಸ್ತಾಪ ಬಂದಾಗ ಮಹಾನಗರ ಪಾಲಿಕೆಯವರು ಡೆವಲಪ್‌ಮೆಂಟ್ ಅಥಾರಿಟಿಯವರ ಮೇಲೆ ಹಾಕುತ್ತಾರೆ, ಡೆವಲಪ್‌ಮೆಂಟ್ ಅಥಾರಿಟಿಯವರು ಮಹಾನಗರಪಾಲಿಕೆಯವರ ಮೇಲೆ ಹಾಕುತ್ತಾರೆ, ಮತ್ತೆ ಈ ಗೃಹ ಮಂಡಳಿಯವುರ ಈ ಎರಡು ಪ್ರಾಧಿಕಾರಗಳ ಮಹಾಮಂಡಳಿಯವರ ಮೇಲೆ ಹಾಕುತ್ತಾರೆ. ಹೀಗೆ ಒಬ್ಬರ ಮೇಲೆ ಒಬ್ಬರು ಹಾಕುತ್ತಾ ಸಹಕಾರ ಇಲ್ಲದೆ, ತಾಳ-ಮೇಳ ಇಲ್ಲದೆ ಇರುವುದರಿಂದ ಇವತ್ತು ಯಾವುದೇ ಅಭಿವೃದ್ಧಿ ಕಾರ್ಯಗಳು ನಗರಪ್ರದೇಶಗಳಲ್ಲಿ ಆಗುತ್ತಾ ಇಲ್ಲ. ಇದಕ್ಕೆಲ್ಲ ಮೂಲಕಾರಣವೇನೆಂದರೆ ಒಂದೇ ಖಾತೆಯನ್ನು ವಿವಿಧ ಭಾಗಗಳಲ್ಲಿ ವಿಂಗಡಣೆ

ಮಾಡಿರುವುದು, ನಾಲ್ಕು ಜನ ಮಂತ್ರಿಗಳನ್ನು ನೇಮಕಮಾಡಿರುವುದು, ಬಿಡಿಗೆ ಒಬ್ಬರನ್ನು, ಗೃಹಮಂಡಳಿಗೆ ಒಬ್ಬರನ್ನು, ಎಚ್‌ಯುಡಿ ಗೆ ಒಬ್ಬರನ್ನು, ಮಹಾನಗರಪಾಲಿಕೆಗೆ ಒಬ್ಬರನ್ನು ಮಹಾನಗರಪಾಲಿಕೆಗೆ ಒಬ್ಬರನ್ನು-ಹೀಗೆ ನೇಮಕ ಮಾಡಿರುವುದರಿಂದ ಅಧಿಕಾರ ಹಂಚಿ ಹೋಗಿ ಯಾವುದೇ ಅಭಿವೃದ್ಧಿ ಕಾರ್ಯಗಳು ಸುಗಮವಾಗಿ ನಡೆಯುತ್ತಾ ಇಲ್ಲ. ಇದೆಲ್ಲಾ ಒಬ್ಬರೇ ಕಂಟ್ರೋಲ್ ಮಾಡುವಂಥಾದ್ದು ಆದರೆ ಕೆಲಸ ಕಾರ್ಯಗಳು ಸುಗಮವಾಗಿ ಆಗುತ್ತವೆ. ಆದರೆ ಇವರು ತಮ್ಮ ಅನುಕೂಲದ ಸಲುವಾಗಿ ಅಥವಾ ಬೇರೆ ಯಾವುದೇ ಉದ್ದೇಶದ ಸಲುವಾಗಿ ಈ ರೀತಿ ವಿಂಗಡಣೆ ಮಾಡಿದ್ದಾರೆ. ಇದರಿಂದ ಅನುಕೂಲಕ್ಕಿಂತ ಅನಾನುಕೂಲವೇ ಜಾಸ್ತಿಯಾಗಿದೆ. ಇದನ್ನು ಸರ್ಕಾರದವರು ಗಂಭೀರವಾಗಿ ತೆಗೆದುಕೊಂಡು ಪರಿಶೀಲನೆ ಮಾಡಬೇಕು ಇಲ್ಲದೆ ಹೋದರೆ ಪರಸ್ಪರ ಹೊಂದಾಣಿಕೆ ಇಲ್ಲದೆ ಎಲ್ಲ ವಿಭಾಗಗಳಲ್ಲಿಯೂ ತೊಂದರೆ ಉಂಟಾಗಿ ನಗರ ಪ್ರದೇಶಗಳು ಯೋಜನಾ ಬದ್ಧವಾಗಿ ಬೆಳವಣಿಗೆ ಹೊಂದಲು ಅಡ್ಡಿ ಉಂಟಾಗುತ್ತದೆಂದು ಸರ್ಕಾರದ ಗಮನವನ್ನು ಈ ಸಂದರ್ಭದಲ್ಲಿ ಸೆಳೆಯಬಯಸುತ್ತೇನೆ. ಇನ್ನೊಂದು ಬಹು ಮುಖ್ಯವಾಗ ಸಮಸ್ಯೆ ಎಂದರೆ, ನಗರಪ್ರದೇಶಗಳಲ್ಲಿಯ ಒಳಚರಂಡಿ ಸಮಸ್ಯೆ. ಇವತ್ತು ಶೇಕಡ 50 ರಷ್ಟು ನಗರಪ್ರದೇಶಗಳಲ್ಲಿ ಒಳಚರಂಡಿ ಯೋಜನೆಯನ್ನು ಆಳವಡಿಸಿಲ್ಲ. ಇದೇ ಪರಿಸ್ಥಿತಿ ಮುಂದುವರೆದರೆ ಅದು ಹುಬ್ಬಳ್ಳಿ, ಧಾರವಾಡ, ಬೆಂಗಳೂರು, ಮೈಸೂರು, ಮಂಗಳೂರು ಯಾವುದೇ ನಗರಪ್ರದೇಶವನ್ನು ತೆಗೆದುಕೊಂಡರೂ ಸಹಿತ ಅಲ್ಲಿ ಸರಿಯಾದ ಒಳಚರಂಡಿ ಯೋಜನೆಯನ್ನು ಆಳವಡಿಸಿಲ್ಲ, ಆಳವಡಿಸಿದ್ದ ಕಡೆಗಳಲ್ಲಿ ಪೂರ್ಣಮಾಡಿಲ್ಲ. ಇದೇ ರೀತಿ ಮುಂದುವರೆದರೆ 10-20 ವರ್ಷಗಳಲ್ಲಿ ನಾವು ಮೂಗುಮುಚ್ಚಿಕೊಂಡು ಅಡ್ಡಾಡುವಂತಹ ಪರಿಸ್ಥಿತಿ ಬರುತ್ತದೆ. ನಗರದ ನೈರ್ಮಲ್ಯ ಕೆಟ್ಟುಹೋಗಿ ಅನಾರೋಗ್ಯಕರವಾದ ವಾತಾವರಣವನ್ನು ಇವತ್ತು ನಾವು ನಗರಪ್ರದೇಶಗಳಲ್ಲಿ ಕಾಣುತ್ತಿದ್ದೇವೆ. ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡುತ್ತಿದ್ದೇವೆ. ಇವರು ಅಂಡರ್ ಗ್ರಾಂಡ್ ಡ್ರೈನೈಜ್ ಸಿಸ್ಟಂ ತರಲಿಕ್ಕೆ ಯುದ್ಧೋಪಾದಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಇವತ್ತು ಹುಬ್ಬಳ್ಳಿ-ಧಾರವಾಡ ನಗರಪ್ರದೇಶಗಳನ್ನು ಉದಾಹರಣೆಯಾಗಿ ತೆಗೆದುಕೊಂಡರೆ ಮಾನ್ಯ ಸಚಿವರು ವಿಧಾನಸಭೆಯಲ್ಲಿ ಉತ್ತರವನ್ನು ಕೊಟ್ಟಿದ್ದಾರೆ ಈ ನಗರದಲ್ಲಿ ಶೇಕಡ 50 ರಷ್ಟು ಪ್ರದೇಶಗಳಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಅಳವಡಿಸಿಲ್ಲ ಎಂದು. ಅದಕ್ಕೆ ಏನು ಕ್ರಮತೆಗೆದುಕೊಳ್ಳುತ್ತೀರಿ ಎಂದು ಕೇಳಿದಕ್ಕೆ, ವಿಶ್ವಬ್ಯಾಂಕ್ ನೆರವು ತೆಗೆದುಕೊಂಡು ಈ ಯೋಜನೆಯನ್ನು ಪೂರ್ಣ ಮಾಡುತ್ತೇವೆ ಎಂದು ಹೇಳಿದ್ದಾರೆ. ಆದರೆ ಇದನ್ನು ಹೇಳಿ ಎರಡು ವರ್ಷಗಳಾಯಿತು, ನಾನು ವಿಧಾನಸಭೆಗೆ ಪ್ರವೇಶ ಮಾಡಿದ ತಕ್ಷಣ ಈ ಪ್ರಶ್ನೆಯನ್ನು ಕೇಳಿದೆ ಎರಡು ವರ್ಷಗಳಿಂದ ಇವತ್ತಿನವರೆಗೂ ವಿಶ್ವಬ್ಯಾಂಕಿಗೆ ಯಾವುದೇ ಪ್ರಪೋಸಲ್ ಹೋಗಿಲ್ಲ, ಯಾವುದೇ ನೆರವು ಬಂದಿಲ್ಲ. ಈಗ ಜನ ಪರದಾಡುತ್ತಿದ್ದಾರೆ, ಇದು ಕೇವಲ ಹುಬ್ಬಳ್ಳಿ-ಧಾರವಾಡದಲ್ಲಿ ಅಷ್ಟೇ ಅಲ್ಲ ಎಲ್ಲಾ ನಗರಪ್ರದೇಶಗಳ ಪರಿಸ್ಥಿತಿ ಇದೇ ಆಗಿದೆ. ಅದಕ್ಕಾಗಿ ಸರ್ಕಾರವು ಇದನ್ನು ಗಂಭೀರವಾಗಿ ತೆಗೆದುಕೊಂಡು ಇದಕ್ಕಾಗಿ ಇರುವ ಯೋಜನೆಯನ್ನು ಅನುಷ್ಠಾನದಲ್ಲಿ ತರಲು ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನೊಂದು ಬಹುಮುಖ್ಯವಾದ ವಿಷಯ ಅಧಿಕಾರಿಗಳ ವರ್ಗಾವಣೆ ಇವತ್ತು ಸರ್ಕಾರದ ಎಲ್ಲ ಇಲಾಖೆಗಳಲ್ಲಿ ನೋಡಿ ಅದು ಕಂದಾಯ ಇಲಾಖೆ

ಇರಬಹುದು, ಪಿಡಬ್ಲೂ ಡಿ ಇರಬಹುದು, ಪೋಲಿಸ್ ಇಲಾಖೆ ಇರಬಹುದು ಈ ಎಲ್ಲಾ ಇಲಾಖೆಗಳಲ್ಲಿ 3 ವರ್ಷಕ್ಕೊಮ್ಮೆ ವರ್ಗಾವಣೆ ಆದರೆ ಮಹಾನಗರ ಸಭೆಗಳಲ್ಲಿ ಕೆಲಸಮಾಡುವಂತಹ ಅಧಿಕಾರಿಗಳ ವರ್ಗಾವಣೆಯನ್ನು ಮತ್ತು ಅಲ್ಲಿಯ ಸಿಬ್ಬಂದಿ ವರ್ಗವನ್ನು ನಾವು ಏಕೆ ವರ್ಗಾವಣೆ ಮಾಡುವುದಿಲ್ಲ. ಮಾಹಾನಗರಸಭೆಗಳಲ್ಲಿ ಕೆಲಸಮಾಡುವಂತಹವರು 20-25 ವರ್ಷಗಳಿಂದ ಅಲ್ಲಿಯೇ ಇದ್ದಾರೆ ಪಟ್ಟಭದ್ರಹಿತಾಸಕ್ತಿಗಳನ್ನು ಬಳಸಿಕೊಂಡಿದ್ದಾರೆ. ಇವತ್ತು ಒಬ್ಬ ಕಾರ್ಪೋರೇಟರ್ ಆಗಲಿ ಅಥವಾ ಒಬ್ಬ ಜನತಾ ಪ್ರತಿನಿಧಿಯಾಗಲಿ ಅಲ್ಲಿ ಕೆಲಸಕ್ಕೆ ಹೋದರೆ "ನೀವು ಏನು ಮೂರು ವರ್ಷ ಇರಬಹುದು ಅಥವಾ 5 ವರ್ಷ ಇರಬಹುದು ನಾನು ಮಾತ್ರ ಇಲ್ಲೇ ಖಾಯಂ ಇರುವವನು ನೀವು ಏನು ಮಾಡಿಕೊಳ್ಳುತ್ತೀರೋ ಮಾಡಿಕೊಳ್ಳಿ" ಎಂದು ಈ ರೀತಿಯ ಉತ್ತರವನ್ನು ಎಷ್ಟೋ ಅಧಿಕಾರಿಗಳು ಕೊಟ್ಟಿದ್ದಾರೆ. ಈ ಬಗ್ಗೆ ಹಿಂದೆ ಮುಖ್ಯಮಂತ್ರಿಗಳ ಗಮನವನ್ನು ಸೆಳೆದಿದೆ ಅವರು ಇದರ ಬಗ್ಗೆ ಕ್ರಮವನ್ನು ತೆಗೆದುಕೊಳುತ್ತೇವೆ ಎಂದು ಹೇಳಿದರೇ ಹೊರತು ಇವತ್ತಿನವರೆಗೆ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಒಂದು ಮಹಾನಗರಪಾಲಿಕೆಯಿಂದ ಇನ್ನೊಂದು ಮಹಾನಗರಪಾಲಿಕೆಗೆ ವರ್ಗಾವಣೆ ಮಾಡುವ ಅಧಿಕಾರವು ಸರ್ಕಾರಕ್ಕೆ ಇಲ್ಲವೆ? ಅಥವಾ ಯಾವುದೇ ತಾಂತ್ರಿಕ ದೋಷವಿದ್ದರೆ ನಿವಾರಣೆ ಮಾಡುವ ಅಧಿಕಾರ ಸರ್ಕಾರಕ್ಕೆ ಇಲ್ಲವೆ? ಪ್ರತಿ ಮೂರು ವರ್ಷಗಳಿಗೊಮ್ಮೆ ಮಹಾನಗರಪಾಲಿಕೆಯಲ್ಲಿ ಕೆಲಸ ಮಾಡುವ ಅಧಿಕಾರಿಗಳನ್ನು ವರ್ಗಾವಣೆ ಮಾಡಿದರೆ ಅವರಲ್ಲಿ ಕೆಲಸದ ದಕ್ಷತೆ ಬರುತ್ತದೆ ಮತ್ತು ನಾವು ಸರಿಯಾಗಿ ಕೆಲಸ ಮಾಡಿಬೇಕು ಇಲ್ಲದಿದ್ದರೆ ನಮ್ಮನ್ನು ವರ್ಗಾವಣೆ ಮಾಡುತ್ತಾರೆ ಎನ್ನುವ ಹೆದರಿಕೆ ಅವರಲ್ಲಿ ಬರುತ್ತದೆ. ಈ ದಿಶೆಯಲ್ಲಿ ಸರ್ಕಾರವು ಗಮನಹರಿಸಿ ವರ್ಗಾವಣೆ ವಿಷಯವನ್ನು ಲಘುವಾಗಿ ತೆಗೆದುಕೊಳ್ಳದೆ ತೀರಾ ಗಂಭೀರವಾಗಿ ತೆಗೆದು ಕೊಳ್ಳಬೇಕೆಂದು ಸರ್ಕಾರವನ್ನು ನಾನು ಒತ್ತಾಯ ಮಾಡುತ್ತೇನೆ. ಇನ್ನೊಂದು ಪ್ರಾಮುಖ್ಯವಾದ ವಿಷಯವೇನೆಂದರೆ ನಗರಪ್ರದೇಶಗಳಲ್ಲಿಯ ಕುಡಿಯುವ ನೀರಿನ ಸಮಸ್ಯೆ. ಇವತ್ತು ಯಾವುದೇ ನಗರಪ್ರದೇಶಗಳಲ್ಲಿ ಹೋದರೂ ಅಲ್ಲಿಯ ಜನ ನಮ್ಮನ್ನು ಕೇಳುತ್ತಾರೆ ನೀವು ನಮಗೆ ಪ್ರತಿ ದಿವಸ ಕುಡಿಯುವ ನೀರು ಬರುವಂತೆ ವ್ಯವಸ್ಥೆ ಮಾಡುತ್ತೀರೋ ಇಲ್ಲವೋ ಎಂದು. ಇವತ್ತು ಅಲ್ಲಿಯ ನಾಗರಿಕರಿಗೆ ರಸ್ತೆಗಳನ್ನು ಕೊಡದಿದ್ದರೂ ನಡೆಯುತ್ತದೆ. ನೈರ್ಮಲ್ಯವನ್ನು ಕಾಪಾಡಿಕೊಳ್ಳದಿದ್ದರೂ ನಡೆಯುತ್ತದೆ, ಆದರೆ ಮೂಲಭೂತವಾಗಿ ಮನುಷ್ಯ ಬದುಕಲು ಅವಶ್ಯ ಇರುವಂತಹ ಕುಡಿಯುವ ನೀರನ್ನು ನಾವು ಒದಗಿಸದಿದ್ದರೆ ನಾವು ಏನು ಸಾಧಿಸಲು ಸಾಧ್ಯ. ಆದ್ದರಿಂದ ಸರ್ಕಾರದವರು ಪ್ರತಿ ನಗರದಲ್ಲಿಯೂ ಕುಡಿಯುವ ನೀರಿನ ಯೋಜನೆಯನ್ನು ಸರಿಯಾಗಿ ಅನುಷ್ಠಾನಕ್ಕೆ ತಂದು ಪ್ರತಿನಿತ್ಯ ಕುಡಿಯುವ ನೀರು ಸಿಗುವಂತೆ ಮಾಡಿದ್ದರೆ ಜನಸಾಮಾನ್ಯರಲ್ಲಿ ಸರ್ಕಾರವು ಧನ್ಯತೆಯನ್ನು ತೋರಿಸಲು ಸಾಧ್ಯವಾಗುತ್ತದೆ. ಹುಬ್ಬಳ್ಳಿ-ಧಾರವಾಡ ನಗರಗಳಲ್ಲಿ ವಾರಕ್ಕೊಮ್ಮೆ ಕುಡಿಯುವ ನೀರನ್ನು ಬಿಡುತ್ತಿದ್ದರು ನಂತರ ಅದು ಮೂರು ದಿನಗಳಿಗೊಮ್ಮೆ ಬರಲಾರಂಭಿಸಿತು ಮೊದಲು ಹತ್ತತ್ತು ದಿವಸಗಳಾದರೂ ಕುಡಿಯುವ ನೀರು ಬರುತ್ತಿರಲಿಲ್ಲ. ಇವತ್ತು ಕಾರ್ಪೋರೇಷನ್‌ನವರು ಹಲವಾರು ಪ್ರಪೋಸಲ್‌ಗಳನ್ನು ಸರ್ಕಾರಕ್ಕೆ ಕಳುಹಿಸಿದ್ದಾರೆ. ಮಲಪ್ರಭಾ ಒಂದನೇ ಯೋಜನೆ ಮುಗಿಯಿತು. ಎರಡನೆ ಯೋಜನೆ ಮುಗಿದರೂ ಕೂಡ ಇವತ್ತು ನಗರಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಆಗಲಿಲ್ಲ. ಎರಡು ದಿವಸಕ್ಕೊಮ್ಮೆ ಬಿಡುವುದು, ವಾರಕ್ಕೊಮ್ಮೆ ಬಿಡುವುದು ಅಥವಾ

ಬಿಡದೇ ಇರುವುದನ್ನು ದಿನಾ ಪತ್ರಿಕೆಗಳಲ್ಲಿ ಓದುತ್ತೇವೆ ನೀರಿನ ವ್ಯತ್ಯಯ ಎಂದು. ಇವತ್ತು ಬೆಂಗಳೂರಿನಲ್ಲಿ ನೀರಿನ ಎಜೆನ್ಸಿ ಅಂದರೆ ನೀರಿನ ಕಲೆಕ್ಷನ್ ಆಗಲಿ, ಡಿಸ್ಟ್ರಿಬ್ಯೂಷನ್ ಸಿಸ್ಟಂ ಆಗಲಿ ಒಂದೇ ಮಂಡಳಿ ನಡೆಸುತ್ತಿದೆ.

ಉಪಾಧ್ಯಕ್ಷರು : ಇವತ್ತು ಹುಬ್ಬಳ್ಳಿ-ಧಾರವಾಡ ಡಿಸ್ಟ್ರಿಬ್ಯೂಷನ್ ಸಿಸ್ಟಂನಲ್ಲಿ ಜನರು ನೀರನ್ನು ಕುಡಿಯುವುದರ ಬದಲಾಗಿ ಹಾದಿಗುಂಟ ನೀರನ್ನು ಹಾಯಿಸುತ್ತಿದ್ದಾರೆ ಅದನ್ನು ಬಂದ್ ಮಾಡಿಸಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರ ಗಮನಕ್ಕೆ ಅದು ಬಂದಿದೆ, ಆದರೆ ನಮ್ಮ ಸರ್ಕಾರದ ಗಮನಕ್ಕೆ ಬಂದಿಲ್ಲ, ಎಂಥ ಸರ್ಕಾರ ಇದೆ ನೋಡಿ.

ಶ್ರೀ ಬಿ.ಎಸ್. ಬಚ್ಚೇಗೌಡ : ಅವರ ಕ್ಷೇತ್ರದಿಂದ ಹುಬ್ಬಳ್ಳಿ-ಧಾರವಾಡಕ್ಕೆ ನೀರು ತರುವಲ್ಲಿ ಮಧ್ಯೆ-ಮಧ್ಯೆ ಏರ್ ವೆಂಟಿಲೇಟರ್ಸ್ ಎಲ್ಲೆಲ್ಲಿ ಇದೆ ಅಲ್ಲಿ ನೀರನ್ನು ಸಾಗುವಳಿಗೆ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ ಅದನ್ನು ಬಂದ್ ಮಾಡಿ ಎಂದು ಹೇಳಿ ಸ್ವಲ್ಪ ತಕರಾರು ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರ ಗಮನಕ್ಕೆ ಬಂದಿದೆ, ಆದರೆ ಸರ್ಕಾರದ ಗಮನಕ್ಕೆ ಬಂದಿಲ್ಲ, ಕುರುಡು ಸರ್ಕಾರ ಇದೆ ಎಂದು ಹೇಳುತ್ತಿದ್ದಾರೆ.

ಉಪಾಧ್ಯಕ್ಷರು : ಶೆಟ್ಟರ್‌ರವರು ಅದರ ಬಗ್ಗೆ ಹೇಳಲಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರಾದರೂ ಏನು ಮಾಡುತ್ತಾರೆ ಅದು ಅವರ ಕಂಟ್ರೋಲ್‌ನಲ್ಲಿ ಇಲ್ಲ, ಏಕೆಂದರೆ " ತೀನ್ ತೇರಾ ನೌವ್ ಅಟರಾ" ಎಂದು ಒಂದು ಪೋರ್ಟ್ ಫೋಲಿಯದಲ್ಲಿ 9 ಖಾತೆ ಮಾಡಿದರೆ ಯಾರ ಕಂಟ್ರೋಲ್ ಇರುತ್ತದೆ, ಆದ್ದರಿಂದ ಅವರಿಗೆ ಮಾಡಲು ಸ್ವಲ್ಪ ಕಷ್ಟ ಇದೆ.

ಶ್ರೀ ಬಿ.ಎನ್. ಬಚ್ಚೇಗೌಡ : ಅದನ್ನೆಲ್ಲಾ ಕಂಟ್ರೋಲ್ ಮಾಡಿ ಎಕ್ಸಸ್ ವಾಟರ್ ಬರುವ ಹಾಗೆ ಮಾಡಿದ್ದೇವೆ. ಆ ರೈತರನೂ ಪ್ರಾಸಿಕ್ಯೂಟ್ ಮಾಡಬೇಕು, ಪೋಲಿಸರಿಗೆ ಹೇಳಬೇಕು ಎಂದರೆ ಇದೆಲ್ಲಾ ಸ್ವಲ್ಪ ತಕರಾರು ಇದೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಉಪಾಧ್ಯಕ್ಷರೆ, ತಾವು ಏನು ಅಭಿಪ್ರಾಯಪಟ್ಟಿದ್ದಿರಿ ಆ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಇವತ್ತು ಮಹಾನಗರಸಭೆಯಿಂದ ಒಂದು ಪ್ರಪೋಸಲ್ ಬಂದಿದೆ ಅದರಲ್ಲಿ ಸರ್ಕಾರಕ್ಕೆ 25 ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ಮಾಡಿದ್ದಾರೆ. ಅದರಲ್ಲಿ ಸೌದತ್ತಿಯಿಂದ ಹುಬ್ಬಳ್ಳಿ-ಧಾರವಾಡಕ್ಕೆ ಬರುವಂಥ ದಾರಿಯಲ್ಲಿ ಕೊಳವೆಗಳನ್ನು ಹಾಕಿದ್ದಾರೆ. ನಾನು ಮತ್ತು ಇತರ ಶಾಸಕರು ಜನ ಪ್ರತಿನಿಧಿಗಳೊಂದಿಗೆ ಅಲ್ಲಿಗೆ ಹೋಗಿ ಭೇಟಿ ಕೊಟ್ಟಾಗ ನೋಡಿದ್ದೇವೆ, ಅಲ್ಲಿ 270 ಕಡೆ ಲಿಕೇಜಸ್ ಇತ್ತು, ನೀರು ಸೋರುತ್ತಾ ಇದೆ. ದೊಡ್ಡ ದೊಡ್ಡ ಹೊಂಡ, ಕೆರೆಗಳು ದಾರಿಯಲ್ಲಿ ಆಗಿವೆ. ಅದನ್ನು ಬಂದ್ ಮಾಡಬೇಕು, ರಿಪೇರಿ ಮಾಡಬೇಕು ಎಂದು ಸರ್ಕಾರಕ್ಕೆ ನಾನು ಒತ್ತಾಯ ಮಾಡುತ್ತಿದ್ದೇನೆ. ಕೆಲವು ಕಡೆ ರಿಪೇರಿ ಮಾಡಿದರೂ ಕೂಡ ಇನ್ನು ಕೆಲವು ಹೊಸ ಲೀಕೆಜ್ ಆಗುತ್ತಾ ಇವೆ. ಏಕೆಂದರೆ ಅಲ್ಲಿ ಹಾಕಿರುವ ಪಂಪ್‌ಗಳು ಹಳೆಯದಾಗಿವೆ ಅಥವಾ ಅವು

ಕ್ವಾಲಿಟಿ ಪಂಪ್‌ಗಳು ಇಲ್ಲದೆ ಇರುವುದರಿಂದ ಈ ಸಮಸ್ಯೆಯು ಉದ್ಭವವಾಗಿದೆ. ಮಹಾನಗರಸಭೆಯವರು ಈಗಾಗಲೇ ಸರ್ಕಾರಕ್ಕೆ ಪ್ರಪೋಸಲ್ ಕೊಟ್ಟಿದ್ದಾರೆ. 25 ಕೋಟಿ ರೂಪಾಯಿಗಳ ಯೋಜನೆಯನ್ನು ಸರ್ಕಾರದ ಮೇಲೆ ಇಟ್ಟಿದ್ದಾರೆ. ಇದರಲ್ಲಿ ಹಳೆಯ ಪಂಪ್‌ಗಳನ್ನು ತೆಗೆದು ಹೊಸ ಪಂಪ್‌ಗಳನ್ನು ಹಾಕುವುದು ಮತ್ತು ಇನ್ನೂ ಹಲವಾರು ಯೋಜನೆಗಳು ಇವೆ ಅವುಗಳು ಸರ್ಕಾರದ ಮುಂದೆ ಇವೆ ಇಂಥ ಯೋಜನೆಗಳನ್ನು ಮಂಜೂರು ಮಾಡಿದರೆ ಸರಿಯಾದ ದಿಕ್ಕಿನಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯ ಎನ್ನುವಂತಹ ಸೂಚನೆಯು ಇವತ್ತು ಸರ್ಕಾರದ ಮುಂದೆ ಬಂದಿದೆ.

1.30 ಪಿ. ಎಂ.

ಆದರೆ ಸರ್ಕಾರ ಇನ್ನೂ ಆ ಒಂದು ಸೂಚನೆ ಬಗ್ಗೆ ಗಮನಹರಿಸಿಲ್ಲ. ಅದಕ್ಕಾಗಿ ಸರ್ಕಾರ ಕುಡಿಯುವ ನೀರಿನ ಸಮಸ್ಯೆಯನ್ನು ನಿವಾರಣೆ ಮಾಡುವುದಕ್ಕೆ ತೀವ್ರ ಗಮನ ಹರಿಸಬೇಕು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮತ್ತು ಅದೇರೀತಿ ಇವತ್ತು ಹುಬ್ಬಳ್ಳಿ-ಧಾರವಾಡ ಇರಲಿ ಅಥವಾ ನಗರಗಳು ಇರಲಿ, ಎಲ್ಲಾ ನಗರ ಪ್ರದೇಶಗಳು ಒಂದು ಸಮ-ಸಮವಾದ ರೀತಿಯಲ್ಲಿ ಬೆಳವಣಿಗೆಯಾಗಬೇಕು. ಒಂದು ಯೋಜನಾಭದ್ಧವಾಗಿ ಬೆಳವಣಿಗೆಯಾಗಬೇಕು. ಇವತ್ತು ಒಂದು ಪ್ರದೇಶ ಬೆಳೆಯಿತು ಎಂದರೆ ಅದೇ ಪ್ರದೇಶ ಬೆಳೆದುಕೊಳ್ಳುತ್ತಾ ಹೋಗಬೇಕಾಗುತ್ತದೆ. ಒಂದು ಪ್ರದೇಶ ಬೆಳೆಯಲಿಲ್ಲ ಎಂದರೆ ಅದು ಡೌನ್‌ಫಾಲ್ ಆಗುತ್ತಾ ಹೋಗುತ್ತದೆ. ಇವತ್ತು ನಾವು ಬೆಂಗಳೂರನ್ನು ತೆಗೆದುಕೊಳ್ಳೋಣ ಇವತ್ತು ಬೆಂಗಳೂರಿನಲ್ಲಿ ಕೈಗಾರಿಕೆಗಳು ಬರುತ್ತದೆ, ಹಲವಾರು ಅವಕಾಶಗಳು ಬರುತ್ತವೆ. ಆದರೆ ಮತ್ತೆ ಮತ್ತೆ ಅವಕಾಶಗಳನ್ನು ಹಾಗೂ ಹೊಸಹೊಸ ಕೈಗಾರಿಕೆಗಳನ್ನು ನಾವು ಬೆಂಗಳೂರಿನಲ್ಲಿ ಬೆಳೆಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅದರ ಬದಲು ಇವತ್ತು ಎರಡನೇ ದೊಡ್ಡ ಮಹಾನಗರವಾದ ಹುಬ್ಬಳ್ಳಿ-ಧಾರವಾಡದಲ್ಲಿಯಾಗಲಿ, ಬೆಳಗಾವಿಯಲ್ಲಾಗಲಿ ಅಥವಾ ಮಂಗಳೂರಿನಲ್ಲಾಗಲಿ, ಇಂತಹ ಕಡೆಗಳಲ್ಲಿ ಒಂದು ಹೆಚ್ಚಿನ ಬೆಳವಣಿಗೆಯಾಗುವಂತಹ ಇನ್‌ಫ್ರಾಸ್ಟ್ರಕ್ಚರ್ ಮಾಡುವುದಕ್ಕೆ ನಾವು ಸಿದ್ಧರಾಗಿಲ್ಲ. ಸರ್ಕಾರ ಅದರ ಬಗ್ಗೆ ಹೆಚ್ಚಿನ ಗಮನವನ್ನು ಕೊಡುತ್ತಿಲ್ಲ. ಅದಕ್ಕಾಗಿ ಸರ್ಕಾರ ಇವತ್ತು ಇತರ ನಗರಗಳನ್ನೂ ಬೆಳೆಸುವ ದಿಕ್ಕಿನಲ್ಲಿ ಪ್ರಯತ್ನ ಮಾಡಬೇಕಾಗುತ್ತದೆ. ಇತರ ನಗರಗಳನ್ನು ಬೆಳೆಸಬೇಕು ಎಂದರೆ ಅಲ್ಲಿ ಎಲ್ಲಾ ರೀತಿಯಲ್ಲಿ ಸೌಕರ್ಯಗಳನ್ನು ನಾವು ಕೊಡಬೇಕು. ಸರಿಯಾಗಿ ಕುಡಿಯುವ ನೀರಿನ ವ್ಯವಸ್ಥೆ ಇರಬೇಕು, ಸರಿಯಾದ ರಸ್ತೆಯಿರಬೇಕು, ಸಾರಿಗೆ ವ್ಯವಸ್ಥೆ ಸರಿಯಾಗಿ ಇರಬೇಕು. ವಿಮಾನ ಸೌಕರ್ಯವಿರಬೇಕು. ಸರಿಯಾದ ಆಸ್ಪತ್ರೆ ವ್ಯವಸ್ಥೆಯಿರಬೇಕು. ಈ ರೀತಿ ಹಲವಾರು ಮೂಲಭೂತ ಸೌಕರ್ಯಗಳನ್ನು ಕೊಟ್ಟಾಗ ಅಲ್ಲಿ ಹೊಸ ಬೆಳವಣಿಗೆಗಳು, ಹೊಸ ಕೈಗಾರಿಕೆಗಳು ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ನಗರ ಅಭಿವೃದ್ಧಿ ಆಗುವುದಕ್ಕೆ ಸಾಧ್ಯತೆ ಇದೆ. ಅಥವಾ ಆ ದಿಸೆಯಲ್ಲಿ ಸರ್ಕಾರ ಮನಸ್ಸು ಮಾಡದೇ ಹೋದರೆ ಇವತ್ತು ಏನು ಬೆಂಗಳೂರು ಸಿಕ್ಕಾಪಟ್ಟೆ ಬೆಳೆದು ಬಿಟ್ಟಿದೆ ಇನ್ನೂ ಅದೇರೀತಿ ಬೆಳವಣಿಗೆಯಾಗುತ್ತಾ ಹೋಗುತ್ತದೆ. ಬೇರೆ ನಗರಗಳು ಬೆಳೆಯುವುದಿಲ್ಲ. ಅದಕ್ಕಾಗಿ ಸರ್ಕಾರ ಈ ದಿಸೆಯಲ್ಲಿ ಯೋಜನೆ ಮಾಡಬೇಕಾಗಿರುತ್ತದೆ. ಈ ಸೌಕರ್ಯಗಳನ್ನು ಕೊಡುವುದಕ್ಕೆ ಸರ್ಕಾರ ಯಾವರೀತಿ ನಿರ್ಧಾರಗಳನ್ನು ತೆಗೆದುಕೊಂಡಿದೆ ಯೋಜನೆಗಳನ್ನು ತೆಗೆದುಕೊಂಡಿದೆ

ಎನ್ನುವುದನ್ನು ಇವತ್ತು ಸದನದ ಮುಂದೆ ಹೇಳಬೇಕಾಗುತ್ತದೆ. ಇಲ್ಲದಿದ್ದರೆ ಒಂದು ಆರೋಗ್ಯಕರ ಬೆಳವಣಿಗೆ ನಗರದಲ್ಲಿ ಆಗುವುದಕ್ಕೆ ಸಾಧ್ಯವಿಲ್ಲವೆಂದು ಹೇಳಬಯಸುತ್ತೇನೆ. ಇನ್ನು ವಸತಿ ಯೋಜನೆ ಬಗ್ಗೆ ಹೇಳುವುದಾದರೆ, 1995-96ನೇ ಇಸವಿಯಲ್ಲಿ ಏನು ಆಶ್ರಯ ಯೋಜನೆಯನ್ನು ಅನುಷ್ಠಾನಗೊಳಿಸಿದರು, ಆ ಸಂದರ್ಭದಲ್ಲಿ ಏನು ಬಡ ಜನತೆ ಮನೆಗಳನ್ನು ಕಟ್ಟಿಕೊಂಡು ಸರ್ಕಾರದ ಮೇಲೆ ಮತ್ತು ಇಲಾಖಾಧಿಕಾರಿಗಳ ಮೇಲೆ ನಂಬಿಕೆ ಇಟ್ಟುಕೊಂಡಿದ್ದರು, ಅಂತಹ ಜನರಿಗೆ ಇವತ್ತು ಸರ್ಕಾರ ಹಣವನ್ನು ಕೊಟ್ಟಿಲ್ಲ. ಅಂದಾಜು 30 ಕೋಟಿ ರೂಪಾಯಿಯಷ್ಟು ಹಣವನ್ನು ಬಡ ಜನರಿಗೆ ಇವತ್ತು ಸಂದಾಯ ಮಾಡಬೇಕಾಗುತ್ತದೆ. ಇವತ್ತು ಆ ಜನ ಸಾಲಸೋಲ ಮಾಡಿಕೊಂಡು ಮನೆ ಕಟ್ಟಿಕೊಂಡಿದ್ದು ಪ್ರತಿಯೊಂದು ಜಿಲ್ಲೆಗೆ ಒಂದರಿಂದ ಒಂದೂವರೆ ಕೋಟಿ ರೂಪಾಯಿಗಳಷ್ಟು ಹಣವನ್ನು ಮನೆಗಳನ್ನು ಕಟ್ಟಿಸಿಕೊಂಡಿರುವಂತಹ ಆ ಬಡ ಜನರಿಗೆ ಕೊಡಬೇಕಾಗಿರುತ್ತದೆ. ಇನ್ನೂ ಆ ಹಣ ಬಿಡುಗಡೆಯಾಗಿಲ್ಲ. ಇದರ ಬಗ್ಗೆ ಸರ್ಕಾರ ತೀವ್ರ ಗಮನ ಹರಿಸಬೇಕು. 1996-97ನೇ ಸಾಲಿನಲ್ಲಿ ಏನು ಆಶ್ರಯ ಯೇಜನೆಗಳನ್ನು ಅನುಷ್ಠಾನಗೊಳಿಸಿತ್ತು, ಕೇವಲ ಎಸ್‌ಸಿ/ಎಸ್‌ಟಿ ಜನಾಂಗಕ್ಕೆ ಏನು ಮನೆಗಳನ್ನು ಕಟ್ಟಿಸಿಕೊಟ್ಟೆವು, ಅದನ್ನು ಹೊರತುಪಡಿಸಿ ಉಳಿದಂತಹ ವರ್ಗದ ಜನರಿಗೆ ಆಶ್ರಯ ಮನೆಗಳನ್ನು ಇವತ್ತಿನವರೆಗೂ ಕಟ್ಟಿಸಿ ಕೊಡುವುದಕ್ಕೆ ಆಗಿಲ್ಲ. ಇವತ್ತಿನವರೆಗೂ ಅನುಷ್ಠಾನ ಮಾಡುವುದಕ್ಕಾಗಿಲ್ಲ. ದಿನನಿತ್ಯ ಪತ್ರಿಕೆಯನ್ನು ನೋಡಿದಾಗ ಸರ್ಕಾರ ಒಂದೊಂದು ವರ್ಷದ ಸಾಧನೆ ಮಾಡಿದಾಗ, ಎಷ್ಟು ಸೈಟುಗಳನ್ನು ಹಂಚಿದೆ, ಎಷ್ಟು ಮನೆಗಳನ್ನು ಕಟ್ಟಿಸಿದೆ ಎಂದು ಹಲವಾರು ಸಾಧನೆಗಳನ್ನು ಹೇಳೇಹೇಳುತ್ತಾರೆ. ಆದರೆ ನಿಜವಾಗಿ ಅರ್ಥಪೂರ್ಣವಾಗಿ ವಿಚಾರ ಮಾಡಿದಾಗ, ಅಂಕಿಸಂಖ್ಯೆಗಳನ್ನು ನೋಡಿದಾಗ ಇವತ್ತು ಆ ಯೋಜನೆ ಸರಿಯಾಗಿ ಅನುಷ್ಠಾನಗೊಳ್ಳಲಿಲ್ಲ. ಜನಸಾಮಾನ್ಯರಿಗೆ ಬಡಜನರಿಗೆ ಆ ಯೋಜನೆಯ ಪ್ರತಿಫಲ ಮುಟ್ಟಿಲ್ಲ. ಇದನ್ನು ನಾವು ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಅದೇರೀತಿ 1997-98ನೇ ಸಾಲಿನಲ್ಲಿ ಯೋಜನೆಗಳನ್ನು ಮಾಡಿ ಅದಕ್ಕೆ ಇಷ್ಟು ಎಂದು ಹಣವನ್ನು ನಿಗದಿ ಮಾಡಿದ್ದೇವೆ. ಆದರೆ ಇನ್ನು ಆ ಹಲವು ಬಿಡುಗಡೆಯಾಗಿಲ್ಲ. 1997-98ನೇ ಸಾಲಿನಲ್ಲಿ ಯಾವುದೇ ಒಂದು ಹೊಸ ಮನೆ ಮತ್ತು ಆಶ್ರಯ ಯೋಜನೆಯ ಯಾವುದೇ ಪ್ರತಿಫಲ ನಾಗರೀಕರಿಗೆ ಸಿಕ್ಕಿಲ್ಲ. ಯಾವುದೇ ಕ್ಲಿಯರೆನ್ಸ್ ನಾವು ಕೊಟ್ಟಿಲ್ಲ. ಆದುದರಿಂದ ಸರ್ಕಾರ ಕೇವಲ ಹೇಳಿಕೆಗಳನ್ನು ಕೊಡುವುದು ಬೇಡ, ಕೇವಲ ಪತ್ರಿಕಾ ಪ್ರಚಾರವನ್ನು ಮಾಡುವುದು ಬೇಡ, ನಿಜವಾಗಿ ಸರ್ಕಾರ ಜನಪರವಾದ ಯೋಜನೆಗಳನ್ನು ಮಾಡುವುದಾದರೆ ಅದು ಅನುಷ್ಠಾನವಾಗಬೇಕು. ಜನಸಾಮಾನ್ಯರಿಗೆ ಅದರ ಪ್ರತಿಫಲ ಮುಟ್ಟುವಂತೆ ಅದನ್ನು ಅನುಷ್ಠಾನ ಮಾಡಿಸುವಲ್ಲಿ ಅಧಿಕಾರಿಗಳ ಮೇಲೆ ಒತ್ತಡ ತರಬೇಕು ಮತ್ತು ಸರ್ಕಾರ ಅವರ ಮೇಲೆ ಹಿಡಿತವನ್ನು ಇಟ್ಟುಕೊಂಡು ಆ ಕೆಲಸವನ್ನು ಮಾಡಿದಾಗ ಮಾತ್ರ ಆ ಯೋಜನೆ ಸಫಲವಾಗುತ್ತದೆ. ಆ ದಿಸೆಯಲ್ಲಿ ಸರ್ಕಾರ ವಿಫಲವಾಗಿದೆ. ಇವತ್ತು ನಗರಾಭಿವೃದ್ಧಿ ಇಲಾಖೆಯಲ್ಲಾಗಲಿ, ವಸತಿ ಇಲಾಖೆಯಲ್ಲಾಗಲಿ ಎಷ್ಟರಮಟ್ಟಿಗೆ ನಾವು ಅದರಿಂದ ಪ್ರತಿಫಲ, ಅದರಿಂದ ಫಲಿತಾಂಶ ನೋಡಬೇಕಾಗಿತ್ತು ಆ ಸಾಧನೆ ಇಂದು ಕಂಡುಬರುತ್ತಿಲ್ಲ. ಅದಕ್ಕೆ ಇನ್ನೂ ಹೆಚ್ಚಿನ ರೀತಿಯಲ್ಲಿ ಚುರುಕುಗೊಂಡು ಆ ಇಲಾಖೆಗಳು ಕೆಲಸವನ್ನು ಮಾಡಬೇಕಾಗಿದೆ. ಇವತ್ತು ಒಂದು ಮಾತನ್ನು ಹೇಳಬೇಕಾಗಿದೆ. ಇವತ್ತು ಜನಸಂಖ್ಯೆ ಬಗ್ಗೆ ಹೇಳುವುದಾದರೆ, ಇಡೀ ನಮ್ಮ ದೇಶದ

ಜನಸಂಖ್ಯೆಯನ್ನು ತೆಗೆದುಕೊಂಡರೆ ಆ ಜನಸಂಖ್ಯೆಯಲ್ಲಿ ಶೇಕಡ25 ರಷ್ಟು ನಾಗರೀಕರು ನಗರಪ್ರದೇಶದಲ್ಲಿ ವಾಸವಾಗಿದ್ದಾರೆ. ನಗರಕ್ಕೆ ಹೆಚ್ಚಿನ ಜನ ವಲಸೆ ಬರುತ್ತಿದ್ದಾರೆ. ಹಳ್ಳಿಗಾಡಿನಿಂದ ಒಂದು ನೌಕರಿ ಸಲುವಾಗಿ ಇವತ್ತು ನಗರ ಪ್ರದೇಶಕ್ಕೆ ಜನತೆ ಬರುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಹೆಚ್ಚಿನ ಅವಶ್ಯಕತೆ ಇರುವ ವಸತಿ ಸೌಕರ್ಯಗಳನ್ನು, ನೀರಿನ ಸೌಕರ್ಯಗಳನ್ನು ಕಲ್ಪಿಸಿಕೊಡುವಂತಹ ಕೆಲಸವನ್ನು ಈ ಸರ್ಕಾರ ಮಾಡಬೇಕಾಗಿದೆ. ಇವತ್ತಿನ ಸಮಸ್ಯೆ ಏನೆಂದರೆ ಇವತ್ತು ಏನು ಬೆಂಗಳೂರು ಬೆಳೆಯುತ್ತಿದೆ, ಅದೇ ರೀತಿ ಹುಬ್ಬಳ್ಳಿ-ಧಾರವಾಡ ಬೆಳೆಯುತ್ತಿಲ್ಲ ಅಥವಾ ಇತರ ನಗರಗಳೂ ಬೆಳೆಯುತ್ತಿಲ್ಲವೆಂದು ಹೇಳುತ್ತಿದ್ದೇನೆ. ಒಂದು ಉದಾಹರಣೆ ಕೊಡಬೇಕೆಂದರೆ ಉತ್ತರ ಕರ್ನಾಟಕದಲ್ಲಿ ಇದ್ದಂತಹ ದೊಡ್ಡದಾದ ಜವಳಿ ಮಿಲ್‌ನಲ್ಲಿ ಸಾವಿರಾರು ಜನ ನೌಕರರು ಕೆಲಸ ಮಾಡುತ್ತಿದ್ದರು. ಇವತ್ತು ಅದನ್ನು ಬಂದ್ ಮಾಡಬೇಕೆಂದು ಸರ್ಕಾರ ನಿರ್ಣಯ ತೆಗೆದುಕೊಂಡಿರುವುದರಿಂದ ಸಾವಿರಾರು ಜನ ನಿರುದ್ಯೋಗಿಗಳಾಗಿದ್ದಾರೆ, ಹಾಗೂ ಬೀದಿ ಪಾಲಾಗಿದ್ದಾರೆ. ನಾವು ಫಾರಿನ್‌ಗೆ ಹೋಗಿ ಹೊಸ ಕೈಗಾರಿಕೆಗಳನ್ನು ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಆದರೆ ಇಲ್ಲಿರುವಂತಹ ಮಿಲ್‌ಗಳನ್ನು ಬಂದ್ ಮಾಡುತ್ತಿದ್ದೇವೆ. ಹಲವಾರು ಕೋಟಿ ರೂಪಾಯಿಗಳನ್ನು ಅಲ್ಲಿ ಇನ್‌ವೆಸ್ಟ್ ಮಾಡಿದ್ದು, ಇವತ್ತು ಆ ಬಂದ್ ಆಗಿರತಕ್ಕಂಥ ಮಿಲ್ ತೆಗೆಯುವುದಕ್ಕೆ ಅನುಕೂಲವಾಗುತ್ತಿತ್ತು. ಅದನ್ನು ಪುನರ್ ನಿರ್ಮಾಣ ಮಾಡುವುದಾಗಲಿ, ರಿಫಾರಂ ಮಾಡುವುದಕ್ಕಾಗಲಿ ಸಾಧ್ಯವಿಲ್ಲವೆಂದು ಇವತ್ತು ಉತ್ತರ ಬಂದಿದೆ. ಇಷ್ಟು ಕೋಟಿ ರೂಪಾಯಿ ಹಣ ನಷ್ಟವಾಗಿದೆ ಎಂದು ಹೇಳಿದ್ದಾರೆ. ಆದರೆ ಸಂಸತ್ ಸದಸ್ಯರಾದ ವಿಜಯ ಸಂಕೇಶ್ವರರವರು ಸರ್ಕಾರಕ್ಕೆ ಚಾಲೆಂಜ್ ಮಾಡಿದ್ದಾರೆ. ಆ ಮಿಲ್‌ನ್ನು ನನಗೆ ಕೊಡಲಿ, ಅದನ್ನು ಪ್ರಾಫಿಟ್ ಆಗಿ ನಡೆಸಿಕೊಂಡುತ್ತೇನೆ, ಅದನ್ನು ಮಾರಬೇಡಿ, ನಾನು ತೆಗೆದುಕೊಳ್ಳುತ್ತೇನೆ, ಎಲ್ಲಿಯವರಿಗೆ ತೆಗೆದುಕೊಳ್ಳುತ್ತೇನೆ ಎಂದರೆ, ಅದನ್ನು ಲಾಭದಲ್ಲಿ ತರುವವರೆಗೆ ತೆಗೆದುಕೊಂಡು ಬಂದು ಮತ್ತೆ ಸರ್ಕಾರಕ್ಕೆ ಅದನ್ನು ಕೊಡುತ್ತೇನೆ ಎಂದು ಹೇಳಿದ್ದಾರೆ.

ಉಪಾಧ್ಯಕ್ಷರು : ತಾವು ವಸತಿ ಹಾಗೂ ನಗರಾಭಿವೃದ್ಧಿ ಇಲಾಖೆ ಬಗ್ಗೆ ಚರ್ಚೆ ಮಾಡುತ್ತಿದ್ದೀರಿ. ಆ ವಿಷಯ ಬಂದಾಗ ಅದನ್ನು ಮಾತನಾಡಿ.

ಶ್ರೀ ಜಗದೀಶ್ ಶೆಟ್ಟರ್ : ಇವತ್ತು ಇದನ್ನು ಗಂಭೀರವಾಗಿ ತೆಗೆದುಕೊಂಡು ಯಾವುದೇ ಒಂದು ಯೋಜನೆ ಅಥವಾ ಯಾವುದೇ ಒಂದು ಕೈಗಾರಿಕೆ ಇರಲಿ ಅದನ್ನು ನಾವು ಬೆಳವಣಿಗೆ ಮಾಡುವಂತಹ ಸಂದರ್ಭದಲ್ಲಿ ಹಲವಾರು ವಿಷಯಗಳನ್ನು ಕೂಲಂಕುಷವಾಗಿ ವಿಚಾರ ಮಾಡಿ ಅದು ಸರಿಯಾದ ದಿಕ್ಕಿನಲ್ಲಿ ನಡೆಯುವ ಹಾಗೆ ಸರ್ಕಾರ ತೀವ್ರ ಗಮನ ಹರಿಸಬೇಕು ಮತ್ತು ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತಾ, ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಸನ್ಮಾನ್ಯ ಉಪಾಧ್ಯಾಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಈಗ ಸದನ ಮೇಲೆದ್ದು ಪುನಃ 2-30 ಗಂಟೆಗೆ ಸೇರುವುದು.

(ಸದನವು ಪುನಃ ಮಧ್ಯಾಹ್ನ 2 ಗಂಟೆ 37 ನಿಮಿಷಕ್ಕೆ ಸಮಾವೇಶಗೊಂಡಿತು ಮಾನ್ಯ ಅಧ್ಯಕ್ಷರು ತಮ್ಮ ಸ್ಥಾನದಲ್ಲಿದ್ದರು)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ತಾವು ಸಭೆಯನ್ನು ಮುಂದೂಡುವುದಕ್ಕಿಂತ ಮುಂಚೆ ತಮ್ಮಲ್ಲಿ ಒಂದು ಮನವಿ ಮಾಡಿಕೊಳ್ಳುವುದೇನೆಂದರೆ, ಪಾನ ನಿರೋಧವನ್ನು ಸಂಪೂರ್ಣವಾಗಿ ಜಾರಿಗೆ ತರಬೇಕೆಂದು ನನ್ನದೊಂದು ಖಾಸಗಿ ನಿರ್ಣಯ ಇದೆ. ಇವತ್ತು ಈ ಸದನದಲ್ಲಿ ಮಂತ್ರಿಗಳು ಯಾರೊಬ್ಬರೂ ಇಲ್ಲ. ಮಾನ್ಯ ಎಂ.ಸಿ. ನಾಣಯ್ಯನವರು ಒಬ್ಬರೇ ಇಲ್ಲಿ ಇದ್ದಾರೆ. ತಾವು ಈ ನಿರ್ಣಯಕ್ಕೆ ಬೆಂಬಲ ಕೊಡುತ್ತಿದ್ದೀರಿ. ಇಂತಹ ಒಂದು ಪ್ರಾಮುಖ್ಯವಾದ ನಿರ್ಣಯ ಬರುತ್ತದೆಂದು ಹೇಳಿದರೂ ಚರ್ಚೆಯಾಗಬೇಕೆಂದಿದ್ದರೂ ಸಹ ಸರ್ಕಾರದಲ್ಲಿ ಬಹುಶಃ ಪಿತೂರಿ ನಡೆಯುತ್ತಾ ಇದೆ. ಇದು ಯಾವ ಕಾಲದಲ್ಲಿಯೂ ಆಗಬಾರದೆಂದು

ಅಧ್ಯಕ್ಷರು : ಪಿತೂರಿ ಏನೂ ಇಲ್ಲ. ಹವಾ ಈ ರೀತಿ ಇರುವುದರಿಂದ ನಿರೋಧ ಬೇಡ ಎಂದು ಅಷ್ಟೆ.

ಶ್ರೀ ವಾಟಾಳ್ ನಾಗರಾಜ್ : ಪ್ರಾಮುಖ್ಯವಾಗಿರತಕ್ಕಂಥ ಪಾನ ನಿರೋಧವನ್ನು ಜಾರಿ ಮಾಡಬೇಕೆಂದು ಹೇಳಿ ಶ್ರೀ ನಾಣಯ್ಯನವರು ನನ್ನ ಹತ್ತಿರ ಬೆಂಬಲ ಕೊಡುತ್ತೇನೆಂದು ಪರೋಕ್ಷವಾಗಿ ಮಾತನಾಡಿದ್ದಾರೆ.

ಶ್ರೀ ಎಂ.ಸಿ. ನಾಣಯ್ಯ : ನಾನು ಪಾನ ನಿರೋಧಕ್ಕೆ ಸಂಪೂರ್ಣವಾಗಿ ಬೆಂಬಲ ಕೊಡುವುದಕ್ಕಾಗುವುದಿಲ್ಲ. ಪಾನ ಎನ್ನುವುದು ಇರಬೇಕು, ಆದರೆ ಅದು ಮಿತಿಯಲ್ಲಿರಬೇಕೆಂದು ಹೇಳುವವನು ನಾನು.

ಅಧ್ಯಕ್ಷರು : ಈಗ ನಿಮ್ಮ ವಾದವನ್ನೆಲ್ಲ ಮುಂದಿನ ಶುಕ್ರವಾರ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇದೊಂದು ಬಹಳ ಪ್ರಾಮುಖ್ಯವಾದಂಥ ನಿರ್ಣಯ.

ಅಧ್ಯಕ್ಷರು : ಈಗ ಸದನದಲ್ಲಿ ಮಂತ್ರಿಗಳು, ಸದಸ್ಯರುಗಳು ಯಾರೂ ಇಲ್ಲ. ಆದ್ದರಿಂದ ನಿಮ್ಮ ನಿರ್ಣಯವನ್ನು ಮುಂದಿನ ಶುಕ್ರವಾರ ತೆಗೆದುಕೊಳ್ಳೋಣ.

ಈಗ ಸಭೆಯನ್ನು ಮುಂದೂಡಿ ಮತ್ತೆ ಸೋಮವಾರ ಬೆಳಿಗ್ಗೆ 10 ಗಂಟೆಗೆ ಸಭೆ ಸೇರೋಣ.

(ಸದನವು ಮಧ್ಯಾಹ್ನ 2 ಗಂಟೆ 39 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ : 4ನೇ ಆಗಸ್ಟ 1997ರ ಸೋಮವಾರದಂದು ಬೆಳಿಗ್ಗೆ 10 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ).